ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ಬೆಂಗಳೂರು ಪ್ರಕಟಣೆ

SHETTIGARA VAANI

# ಶೆಟ್ಟಿಗಾರ ವಾಣಿ

ಬೆಂಗಳೂರು ನಿವಾಸಿ ಕರಾವಳಿ ಮೂಲದ ಶೆಟ್ಟಿಗಾರ ಸಮಾಜದ ಮುಖವಾಣಿ

ಸಂಪುಟ: 2 | ಜುಲೈ 2025 | ಸಂಚಿಕೆ: 1 | ಪುಟಗಳು: 16

**ಸಂಪಾದಕ ಮಂಡಳಿ**
ಶ್ರೀ ನಾರಾಯಣ ಶೆಟ್ಟಿಗಾರ್
ಶ್ರೀ ಮಾಧವ ಶೆಟ್ಟಿಗಾರ್, ಯು
ಶ್ರೀ ಪ್ರಕಾಶಚಂದ್ರ ಆತ್ರಾಡಿ
ಶ್ರೀ ಪ್ರಭಾಕರ ಶೆಟ್ಟಿಗಾರ್, ಎಂ
ಶ್ರೀ ಮಾಧವ ಶೆಟ್ಟಿಗಾರ್, ಶೆಟ್ಟಿಗಾಡು
ಶ್ರೀ ಸುಂದರ ಎಸ್ ಶೆಟ್ಟಿಗಾರ್, ಎಕ್ಕಾರ್
ಶ್ರೀ ದೊಂಬಯ್ಯ ಶೆಟ್ಟಿಗಾರ್
ಶ್ರೀಮತಿ ಬಾನುಮತಿ ಡಿ ಶೆಟ್ಟಿಗಾರ್
ಸಿ.ಎ. ವಿಶ್ರಾಂತ್ ಬಿ ಎಲ್
ಶ್ರೀ ಯತೀಶ್ ಎಲ್. ಶೆಟ್ಟಿಗಾರ್
ಶ್ರೀಮತಿ ಉಷಾ ಚೇತನ್

**ವಿನ್ಯಾಸ ಮತ್ತು ತಂತ್ರಜ್ಞಾನ ನೆರವು**
ಶ್ರೀ ಯಶಸ್ವಿ ಜೆ
ಶ್ರೀ ರಾಮಕೃಷ್ಣ ಸಾಲಿಕೇರಿ



AI generated image: No photo credits required

## ಶೆಟ್ಟಿಗಾರ – ಬದುಕಿನ ಮೆಲುಕು

1950ರ ದಶಕದ ನೆನಪಿನ ಕಣಜ ಇಣುಕಿ ನೋಡುವುದೇ ಒಂದು ಅನಿರ್ವಚನೀಯ ಆನಂದಾನುಭವದ ಸೌಭಾಗ್ಯ.

ಲಯಬದ್ಧವಾಗಿ ಮಾರ್ದನಿಸಿ, ಕಿವಿಗಳಿಗೆ ಸಂಗೀತದ ಅಲೆಯಾಗಿ ಹೊರಹೊಮ್ಮಿ, ಪ್ರತಿಧ್ವನಿಸುವ ಲಟಪಟ ನಿನಾದದಿಂದಲೇ ನಮ್ಮ ಹಳ್ಳಿಯ ಸಾಲೇರ ಮನೆ ಇದೆಂಬ ತನ್ನ ವಿಶಿಷ್ಟ ಅಸ್ತಿತ್ವವನ್ನು ಸಾರುವ ನೇಕಾರರ ಮನೆ ನಮ್ಮದಾಗಿತ್ತು. ಸಮಾಜದ ಸದಸ್ಯರ ಮಾನ ಮುಚ್ಚಲು ವಸನ ಒದಗಿಸಿ, ತಾನು ಮಾತ್ರ ಅರೆಬೆತ್ತಲೆಯಾಗಿ ಜೀವನ ನಿರ್ವಹಣೆ ಮಾಡುತ್ತಿದ್ದ ನೇಕಾರನ ಬದುಕಿನ ಅನುಭವ ಒಂದು ಕತೆಯಲ್ಲದೆ ಇನ್ನೇನು? ಬೇರೆ ಬೇರೆ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ತಮ್ಮ ಮಕ್ಕಳಿಗೂ ಅದರಲ್ಲೇ ಉಜ್ವಲ ಭವಿಷ್ಯ ತೋರಿಸುವ ಇತರ ಸಮಾಜದ ಅನೇಕ ಹಿರಿಯರ ಮುಂದೆ ನನ್ನ ಮಕ್ಕಳಿಗೆ ಈ ವೃತ್ತಿ ಖಂಡಿತಾ ಬೇಡ ಎಂದು ಸಂಕೋಚದಿಂದ ಹಪಹಪಿಸುವ ಅಂದಿನ ನೇಕಾರನ ಮನಃಸ್ಥಿತಿ ವ್ಯಥೆಯಲ್ಲದೆ ಮತ್ತೇನು? ಏನಿದ್ದರೂ ಕಷ್ಟದಲ್ಲೇ ಆದರೂ ಬದುಕು ಸಾಗಿಸಲು ನೆರವಾದ,

**ವಿಳಾಸ**
ಶೆಟ್ಟಿಗಾರವಾಣಿ, C/o ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ),
ನಂ.8, ಶಾಂತವೇರಿ ಗೋಪಾಲಗೌಡ ನಗರ,
4ನೇ ಅಡ್ಡ ರಸ್ತೆ, ಮೂಡಲಪಾಳ್ಯ, ಬೆಂಗಳೂರು-560072
ಮೊಬೈಲ್: 9535443311
ಇಮೇಲ್: dkpadmashalibng@gmail.com
ವೆಬ್ ಸೈಟ್: www.dkpadmashalibng.in

ಸೂಚನೆ: ಇಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಲೇಖಕರ ವೈಯಕ್ತಿಕ ಅಭಿಪ್ರಾಯಗಳು ಮಾತ್ರ; ಪತ್ರಿಕೆಯ ಅಥವಾ ಕೂಟದ ಅಭಿಪ್ರಾಯಗಳಲ್ಲ.

ಮಕ್ಕಳ ಭವಿಷ್ಯವನ್ನು ಯಾವುದೋ ಒಂದು ದಾರಿಯಲ್ಲಿ ರೂಪಿಸಲು ಸಹಕರಿಸಿದ ನಮ್ಮ ಕುಲಕಸಬು ನಮಗಂತೂ ದೇವರಿಗೆ ಸಮಾನ ಎಂಬುದು ನಿರ್ವಿವಾದ.

ನಮ್ಮ ಮನೆಯಲ್ಲೂ ಐದಾರು ಮಗ್ಗಗಳು ಇದ್ದ ಕಾಲವದು. ಒಂದು ಮಗ್ಗದಲ್ಲಿ ಅಂಗವಸ್ತ್ರ, ಟವೆಲ್ ಗಳು ತಯಾರಾಗುತ್ತಿದ್ದರೂ ಉಳಿದ ಮಗ್ಗಗಳು ಸೀರೆಗೆ ಮೀಸಲು. ಮನೆಯಲ್ಲಿ ಅಪ್ಪಯ್ಯ, ಚಿಕ್ಕಪ್ಪಯ್ಯನವರಿಗೆ ವ್ಯವಸಾಯ ಬಿಟ್ಟರೆ ನೇಯ್ಗೆಯೇ ಉದ್ಯೋಗ. ಅಲ್ಲದೆ 2-3 ಮಂದಿ ಹೊರಗಿನವರೂ ನೇಯ್ಗೆ ಕೆಲಸಕ್ಕೆ ಬರುತ್ತಿದ್ದರು.

ನೇಕಾರ ವಿಶ್ವವಿದ್ಯಾಲಯದ ಆವರಣದಲ್ಲಿ ನೇಕಾರ ಉಪಕರಣ ಪರಿಕರಗಳ ಹೆಸರು ಮತ್ತು ಉದ್ಯೋಗ ಸಂಬಂಧ ಭಾಷೆಯ ಶಬ್ದಗಳ ಭಂಡಾರವೇ ಒಂದು ದೊಡ್ಡ ವಿಶ್ವಕೋಶವಾದೀತು. ಆದರೆ ಅವುಗಳ ಹೆಸರುಗಳನ್ನು ನೆನಪಿಸಿಕೊಳ್ಳಲು ಈಗ ಪಡುವ ಪಾಡು ನನಗೇ ನಾಚಿಕೆ ತರುತ್ತಿದೆ. ಯಾವ ವಸ್ತುವಿಗೇ ಆದರೂ ಉಪಯೋಗದಲ್ಲಿರುವಾಗಷ್ಟೇ ಬೆಲೆ, ಹರಿತ, ತೀಕ್ಷ್ಣತೆ. ಇಲ್ಲವಾದರೆ ಅದು ಮೊಂಡಾಗುತ್ತದೆ; ತುಕ್ಕು ಹಿಡಿಸಿಕೊಳ್ಳುತ್ತದೆ.

ನಮ್ಮ ಅಜ್ಜಯ್ಯನದೂ ಒಂದು ಗುಳಿಮಗ್ಗ ಇತ್ತು. ನೆಲಮಟ್ಟದಲ್ಲಿ ಹಾಸು ಇದ್ದರೆ, ಕುಳಿತಾಗ ಕಾಲು ಎಟಕುವ ವರೆಗೆ ಗುಂಡಿ ತೋಡಿದ್ದು, ಆ ಗುಂಡಿಯಲ್ಲಿರುವ ಕಾಲುಗಳಿಂದ ರೆಕ್ಕೆಗಳ ಚಲನೆ ಮಾಡಬೇಕಿತ್ತು. ಎರಡೂ ಕೈಗಳಿಂದಲೇ ಲಾಳಿಯನ್ನು ಆಚೆ ಈಚೆ ತಳ್ಳಬೇಕಾಗಿತ್ತು. ಈ ಗುಳಿಮಗ್ಗದಲ್ಲಿ ಕಡಿಮೆ ಅಗಲದ ಅಂಗವಸ್ತ್ರ, ಪಾಣಿಪಂಚೆಗಳನ್ನು ಮಾತ್ರ ತಯಾರಿಸಬಹುದಿತ್ತು.

ನೂಲು ಸುತ್ತಲು ರಾಟೆಗಳಿದ್ದವು; ನಳ್ಳಿಗಳಿದ್ದವು. ಹೆಚ್ಚಾಗಿ ನೂಲು ಸುತ್ತುವ ಕೆಲಸ ಹೆಂಗಸರಿಗೆ. ಹಾಸು ಸುತ್ತಲು ಹಾಸಿನ ಮರ, ನೂಲಿನ ನಳ್ಳಿಗಳನ್ನು ನಿಲ್ಲಿಸಲು ಏಣಿ ಇದ್ದವು. ನನಗೆ ಹಾಸು ಮಾಡುವ ನಾಜೂಕಿನ ಕೆಲಸದಲ್ಲೂ ಕೈಯಾಡಿಸಿದ ನೆನಪೂ ಇದೆ.

ಸೀರೆಯ ಎರಡೂ ಕಾಲುಗಳಿಗೆ ಜರಿಯ ವಿನ್ಯಾಸ ಮೂಡಿಸುವ ಅದ್ಭುತ ಕಾರ್ಯಕ್ಕೆ ಉಪಯೋಗಿಸುವ ಯಂತ್ರದ ಕಾರ್ಯವೈಖರಿ ನೋಡುವುದೇ ಚಂದ. ನೇಕಾರನ ನೈಪುಣ್ಯ ಪ್ರದರ್ಶನಕ್ಕೆ ಇದೊಂದು ಸಾಕ್ಷಿ.

ಚಿಕ್ಕಂದಿನಲ್ಲಿ ಮಗ್ಗದ ಬಳಿ ಯಾರೂ ಇಲ್ಲದ ಸಮಯ ನೋಡಿ, ಕುತೂಹಲದಿಂದ ನಾವೂ ನೇಯ್ಗೆ ಮಾಡಿದ ನಿದರ್ಶನಗಳೂ ಇವೆ. ಒಂದೆರಡು ಅಂಗವಸ್ತ್ರ, ಟವೆಲ್, ಸೀರೆಗಳನ್ನು ಕೆಡಿಸಿ, ನಿರುಪಯುಕ್ತಗೊಳಿಸಿದ ಉದಾಹರಣೆಗಳೂ ಇವೆ. ಇಂತಹ ಸಣ್ಣ ಪುಟ್ಟ ನಷ್ಟಗಳಿಂದಲೇ ದೊರೆಯುವುದು ಮುಂದಿನ ಪೀಳಿಗೆ ಉದ್ಯೋಗ ಕಲಿತ ಲಾಭ. ಬಾಲ್ಯದಲ್ಲಿ ಮಾಡಿದ ಕೆಲಸ ತಾನಾಗಿಯೇ ಪರಿಣಿತಿಯನ್ನೂ ನೀಡುತ್ತದೆ; ಹೊಸ ಆವಿಷ್ಕಾರಗಳಿಗೆ ಅಡಿಪಾಯವನ್ನೂ ಹಾಕುತ್ತದೆ.

ನೇಯುವ ಮೊದಲು ಹಾಸಿಗೆ ಗಂಜಿ ಹಾಕಬೇಕು. ಅದು ಒಣಗಿದ ಮೇಲೆ ಬ್ರಶ್ ನಿಂದ ನೂಲುಗಳನ್ನು ಬಿಡಿಬಿಡಿಯಾಗಿಸಬೇಕು. ತುಂಡಾದ ನೂಲುಗಳನ್ನು ಜೋಡಿಸಬೇಕು. ಒಟ್ಟಾರೆ ನೇಯ್ಗೆಯೊಂದು ನವಿರಾದ ಸೂಕ್ಷ್ಮ ಕೆಲಸ.

ತಯಾರಾದ ಸೀರೆ, ವಸ್ತ್ರಗಳನ್ನು ಓರಣವಾಗಿ ಗಳಿಗೆ ಮಾಡಿ ಮಾರಾಟಕ್ಕೆ ಸಿದ್ಧಗೊಳಿಸಬೇಕು. ಅದೂ ಒಂದು ಕಲೆಯೇ.

ಸೀರೆ ಮತ್ತಿತರ ವಸ್ತ್ರಗಳ ತಯಾರಿಗೆ ಬಣ್ಣ ಬಣ್ಣದ ನೂಲುಗಳು ಉಪಯೋಗಿಸಲ್ಪಡುತ್ತವೆ. ನೂಲುಗಳಿಗೆ ಬೇರೆ ಬೇರೆ ಬಣ್ಣ ಹಾಕುವ ಕೆಲಸವನ್ನೂ ನಮ್ಮ ತಂದೆ ಮಾಡುತ್ತಿದ್ದರು.

ನೇಕಾರಿಕೆ ಎಂದರೆ ಸಣ್ಣ ವಿಷಯವಲ್ಲ. ನೇಯ್ಗೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ವ್ಯಾಪ್ತಿ ಅಪಾರ. ಅವುಗಳಲ್ಲಿ ಪರಿಣಿತಿ ಪಡೆಯುವುದೂ ಸುಲಭವಲ್ಲ. ಕಲಿತಷ್ಟೂ ಇನ್ನೂ ತಿಳಿಯಬೇಕಾಗಿರುವುದು ಉಳಿದೇ ಇರುತ್ತದೆ. ನೇಕಾರನ ಮನೆಯೂ ಒಂದು ಉನ್ನತ ಶಿಕ್ಷಣ ಪಾಠಶಾಲೆ ಎನ್ನುವುದರಲ್ಲಿ ಅನುಮಾನವಿಲ್ಲ. ಒಂದರ್ಥದಲ್ಲಿ ಕುಟುಂಬದ ಸದಸ್ಯರೆಲ್ಲರಿಗೂ ಉದ್ಯೋಗ ನೀಡಿ, ಒಗ್ಗೂಡಿಸುವ ಅದ್ಭುತ ಕಾಯಕ ನೇಕಾರಿಕೆ. ಆದರೆ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿಲ್ಲ ಎನ್ನುವುದೇ ಎಲ್ಲರ ಕೊರಗು.

ಮಾನವ ಜೀವನಚಕ್ರದಲ್ಲಿ ಏಳು ಬೀಳುಗಳು ವಿಶೇಷವೂ ಅಲ್ಲ; ಶಾಶ್ವತವೂ ಅಲ್ಲ. ನೇಕಾರಪರ ಸಂಘಟನೆಗಳು ಸಕ್ರಿಯವಾಗಿರುವ ಈ ಕಾಲಘಟ್ಟದಲ್ಲಿ ಕಾಲನ ಕಾಲತುಳಿತಕ್ಕೆ ಸಿಲುಕಿ, ನಲುಗಿ, ನಶಿಸಿ ಹೋಗುತ್ತಿರುವ ಕರಾವಳಿಯ ನೇಕಾರ ಸಂಕುಲದ ಕುಲಗಸಬಿನ ಹೊಸಹುಟ್ಟು, ವೈಭವ, ಹಸನಾದ ಬದುಕು ಕನಸಾಗದೆ ನನಸಾಗಿ ಸಂಭ್ರಮಿಸುವ ದಿನಗಳು ದೂರವಿಲ್ಲ ಎಂಬುದು ನಮ್ಮೆಲ್ಲರ ಆಸೆ, ಹಾರೈಕೆ.

**ಸೆಟ್ಟಿಗಾರ ಶೆಟ್ಟಿಗಾರನಾದ:**

ಹಳ್ಳಿಗಾಡಿನ ಸಾಲೇರ ಮನೆಯಲ್ಲಿ ಹುಟ್ಟಿದ ನಾನು ಶಾಲೆಗೆ ಸೇರಿದ ಮೇಲೆ ಆದದ್ದು 'ನಾರಾಯಣ ಸೆಟ್ಟಿಗಾರ'; ಶೆಟ್ಟಿಗಾರ ಅಲ್ಲ. ಹೌದು, ನಮ್ಮಜ್ಜ ಶೇಷ ಸೆಟ್ಟಿಗಾರ. ನಮ್ಮಪ್ಪ ಬಚ್ಚ ಸೆಟ್ಟಿಗಾರ. ನಮ್ಮ ತಂದೆ ಸಹಿ ಮಾಡುತ್ತಿದ್ದುದು 'ಬಚ್ಚ ಸೆಟ್ಟಿಗಾರನ ರುಜು' ಎಂದೇ. ನಾನು ಕಾಲೇಜು ಬಿಡುವ ವರೆಗೂ ಸೆಟ್ಟಿಗಾರನಾಗಿಯೇ ಉಳಿದಿದ್ದೆ. ಅದಕ್ಕೆ ಪುರಾವೆಯಾಗಿ ನನ್ನ ಪ್ರಕಟಿತ ಯಕ್ಷಗಾನ ಕೃತಿಯ ಮೇಲೆ ಲೇಖಕನ ಹೆಸರು ನಾರಾಯಣ ಸೆಟ್ಟಿಗಾರ ಎಂದೇ ಇದೆ. ಆದರೆ ಕಾಲನ ಪ್ರಭಾವಕ್ಕೆ ಒಳಗಾಗಿ ನನಗೇ ಅರಿವಾಗದಂತೆ ಯಾವಾಗ 'ನಾರಾಯಣ ಶೆಟ್ಟಿಗಾರ' ನಾಗಿ ಬದಲಾವಣೆ ಹೊಂದಿದೆನೋ ನನಗೇ ತಿಳಿಯದು. ಸೆಟ್ಟಿಗಾರನಾಗಿದ್ದಾಗಲೂ English spelling 'SHETTIGAR' ಎಂದಿತ್ತು. 'SHE'ಯೇ 'ಶೆಟ್ಟಿಗಾರ'ನಾಗಲು



ಯಕ್ಷಗಾನ

ಸ್ವಪ್ನವಾಸವದತ್ತ

(ಪ್ರತಿಜ್ಞಾ ಯೌಗಂಧರಾಯಣ ಸಹಿತ)

ಲೇಖಕ:
ನಾರಾಯಣ ಸೆಟ್ಟಿಗಾರ, ಕಂದಾವರ.

೧೯೬೯

ಪ್ರಕಾಶಕರು:
ಕೆ. ರಾಮಪ್ಪ
ಕಂದಾವರ ಗ್ರಾಮ
ಅಂಚೆ: ಮೂಡಲಕಟ್ಟೆ
ಕುಂದಾಪುರ ತಾಲೂಕು (ದ. ಕ.)

ಕಾರಣವಾದುದೆ? ತಿಳಿಯದು. ಒಂದಂತೂ ಸತ್ಯ; ಈಗ ಎಲ್ಲರೂ ಶೆಟ್ಟಿಗಾರರೇ. ಸೆಟ್ಟಿಗಾರರೇ ಇಲ್ಲ. ಆಧುನಿಕ ತ್ವರಿತ ಗತಿಯ ಕಾಲಘಟ್ಟದಲ್ಲಿ 'ಶೆಟ್ಟಿಗಾರ' ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ಶೆಟ್ಟಿಗಾರ್' ಆಗಿಬಿಟ್ಟಿರುವುದೂ ಆಶ್ಚರ್ಯವಲ್ಲ.



**ನಾರಾಯಣ ಶೆಟ್ಟಿಗಾರ್,**
**ಬೆಂಗಳೂರು**

# CIBIL SCORE ಮತ್ತು ಅದರ ಮಹತ್ವ

Loanನ್ನು ತೆಗೆದುಕೊಳ್ಳುವ ಯೋಚನೆಯಲ್ಲಿದ್ದೀರಾ? ಅದು ಶೀಘ್ರದಲ್ಲಿ ಮಂಜೂರಾಗಿ ಪ್ರಕ್ರಿಯೆಗೊಳ್ಳಲಿ ಎಂದು ಬಯಸುತ್ತೀರಾ? ಕಡಿಮೆ ಬಡ್ಡಿದರದಲ್ಲಿ ಲೋನ್ ಬೇಕೆಂದು ನೋಡುತ್ತಿದ್ದೀರಾ? ಹಾಗಾದರೆ, ನಿಮ್ಮ CIBIL ಸ್ಕೋರ್ ಉತ್ತಮವಾಗಿರೋದನ್ನು ಖಚಿತಪಡಿಸಿಕೊಳ್ಳಿ.

### CIBIL SCORE ಎಂದರೇನು?

CIBIL SCORE 300ರಿಂದ 900ರ ಮಧ್ಯದ ಮೂರು ಅಂಕಿಯ ಅಂಕೆ. ಇದು ನಿಮ್ಮ ಸಾಲ ತೀರಿಸುವ ಸಾಮರ್ಥ್ಯವನ್ನು ಸೂಚಿಸುತ್ತದೆ.

TransUnion CIBIL ಸಂಸ್ಥೆ ಈ ಅಂಕೆ ನೀಡುತ್ತದೆ ಮತ್ತು ಬ್ಯಾಂಕ್‌ಗಳು, NBFC ಗಳು ಮತ್ತು ಕ್ರೆಡಿಟ್ ಕಾರ್ಡ್ ಕಂಪನಿಗಳು ಇದನ್ನು ಆಧಾರವಾಗಿಸಿಕೊಂಡು:

- ಲೋನ್ ಅಥವಾ ಕ್ರೆಡಿಟ್ ಕಾರ್ಡ್ ಮಂಜೂರು ಮಾಡಬಹುದೆ ಎಂದು ನಿರ್ಧರಿಸುತ್ತವೆ
- ಯಾವ ಬಡ್ಡಿದರ ನೀಡಬೇಕು ಎಂದು ಆಯ್ಕೆ ಮಾಡುತ್ತವೆ
- ಎಷ್ಟು ಮೊತ್ತದ ಕ್ರೆಡಿಟ್ ನೀಡಬಹುದು ಎಂದು ನಿರ್ಧರಿಸುತ್ತವೆ

750ಕ್ಕಿಂತ ಮೇಲಾಗಿರುವ ಸ್ಕೋರ್ ಉತ್ತಮ ಎಂದು ಪರಿಗಣಿಸಲಾಗುತ್ತದೆ.

### CIBIL SCORE ಹೇಗೆ ಲೆಕ್ಕ ಹಾಕಲಾಗುತ್ತದೆ?

| ಅಂಶಗಳು | ಪ್ರಾಮುಖ್ಯತೆ |
|---|---|
| ಪಾವತಿ ಇತಿಹಾಸ | 35% |
| ಕ್ರೆಡಿಟ್ ಬಳಕೆ ಪ್ರಮಾಣ | 30% |
| ಕ್ರೆಡಿಟ್ ಇತಿಹಾಸದ ಅವಧಿ | 15% |
| ಕ್ರೆಡಿಟ್ ಮಿಶ್ರಣ | 10% |
| ಇತ್ತೀಚಿನ ಕ್ರೆಡಿಟ್ ಅರ್ಜಿ | 10% |

### CIBIL SCORE ಕಡಿಮೆಯಾಗಲು ಕಾರಣಗಳು

- **ತಡವಾದ ಪಾವತಿಗಳು** – EMI ಅಥವಾ ಕ್ರೆಡಿಟ್ ಕಾರ್ಡ್ ಬಿಲ್‌ಗಳನ್ನು ತಡವಾಗಿ ಪಾವತಿಸುವುದು ನಕಾರಾತ್ಮಕ ಪರಿಣಾಮ ಬೀರುತ್ತದೆ
- **ಹೆಚ್ಚು ಕ್ರೆಡಿಟ್ ಬಳಕೆ** – ಕ್ರೆಡಿಟ್ ಲಿಮಿಟ್‌ನ 30% ಕ್ಕಿಂತ ಹೆಚ್ಚಾಗಿ ಖರ್ಚು ಮಾಡಿದರೆ, ಅದು ಹಣದ ನಿರ್ವಹಣೆಯಲ್ಲಿ ಅಸ್ಥಿರತೆ ತೋರಿಸುತ್ತದೆ
- **ಬಹುತೇಕ ಅಸುರಕ್ಷಿತ ಸಾಲಗಳು** - ಕೇವಲ ಪರ್ಸನಲ್ ಲೋನ್ ಅಥವಾ ಕ್ರೆಡಿಟ್ ಕಾರ್ಡ್‌ಗಳು ಇರುವುದರಿಂದ ಸ್ಕೋರ್ ಕೆಡಬಹುದು.
- **ಅತಿಯಾದ ಕ್ರೆಡಿಟ್ ಅರ್ಜಿಗಳು** – ಕಡಿಮೆ ಅವಧಿಯಲ್ಲಿ ಹಲವಾರು ಲೋನ್ ಅಥವಾ ಕ್ರೆಡಿಟ್ ಕಾರ್ಡ್‌ಗಳಿಗೆ ಅರ್ಜಿ ಹಾಕುವುದು ನಿಮ್ಮ ಸ್ಕೋರ್ ಮೇಲೆ ದುಷ್ಪ್ರಭಾವ ಬೀರುತ್ತದೆ.
- **ಕ್ರೆಡಿಟ್ ವರದಿಯ ತಪ್ಪುಗಳು** – CIBIL ವರದಿಯಲ್ಲಿ ತಪ್ಪುಗಳಿದ್ದರೂ ಸರಿಪಡಿಸದೇ ಬಿಡುವುದು ಸ್ಕೋರ್ ತಗ್ಗಿಸಲು ಕಾರಣವಾಗಬಹುದು.
- **ಅನಿಯಮಿತ ಕ್ರೆಡಿಟ್ ಇತಿಹಾಸ** – ನಿಮಗೆ ಲೋನ್ ಅಥವಾ ಕ್ರೆಡಿಟ್ ಇತಿಹಾಸವಿಲ್ಲದಿದ್ದರೆ, ಅಂಕೆ ಲಭ್ಯವಿಲ್ಲದೆ ಅಥವಾ ಕಡಿಮೆ ಇರಬಹುದು.
- **ಸಾಲ ಡೀಫಾಲ್ಟ್‌ಗಳು** – ಸಾಲವನ್ನು ಪೂರ್ತಿ ಪಾವತಿಸದೇ ಬಾಕಿ ಇಡುವುದು ಅಥವಾ write-off ಆಗಿರುವ ಸಾಲಗಳು.

### CIBIL SCORE ಸುಧಾರಿಸಲು ಕೆಲವು ಟಿಪ್‌ಗಳು




- **Balance ಅಥವಾ Limit ಹೆಚ್ಚು ಮಾಡಿ – ಆದರೆ ಖರ್ಚು ಮಾಡಬೇಡಿ.** ನೀವು ನಿಮ್ಮ ಕ್ರೆಡಿಟ್ ಕಾರ್ಡ್ Limit ಹೆಚ್ಚಿಸಿಕೊಳ್ಳಬಹುದು (ಅತ್ಯಧಿಕ ಖರ್ಚು ಮಾಡದೆ). ಇದರಿಂದ credit utilization ratio ಕಡಿಮೆ ಆಗುತ್ತದೆ, ಇದು ಸ್ಕೋರ್‌ಗೆ ಪ್ಲಸ್ ಆಗುತ್ತದೆ.
- **ನಿಮ್ಮ ಹೆಸರಿನಲ್ಲಿ utility bill ಅಥವಾ mobile postpaid bill ಅನ್ನು Auto-Payಗೆ ಇಡಿ.** ನೀವು utility bills ಅಥವಾ postpaid bill ಗಳನ್ನು ಸಮಯಕ್ಕೆ ಪಾವತಿ ಮಾಡುವ ಮೂಲಕ ನೀವು ಪಾವತಿ ಶಿಸ್ತನ್ನು ತೋರಿಸುತ್ತೀರಿ. Credit bureaus ಕೆಲವೊಮ್ಮೆ ಈ history ಅನ್ನು ಪರಿಗಣಿಸುತ್ತವೆ
- **Low-value secured credit card ತೆಗೆದುಕೊಳ್ಳಿ.** ನೀವು ನಿಮ್ಮ Fixed Deposit ಮೇಲೆ secured credit card ತೆಗೆದುಕೊಂಡು, ಅದನ್ನು ಸಮಯಕ್ಕೆ ಪಾವತಿ ಮಾಡಿದರೆ, ನಿಮ್ಮ ಕ್ರೆಡಿಟ್ ಇತಿಹಾಸ ಶುರುವಾಗುತ್ತದೆ ಅಥವಾ ಸುಧಾರಣೆಯಾಗುತ್ತದೆ. ಇದು ಹೊಸಬರಿಗೆ ಬಹುಪಯೋಗಿ.
- **Loan Pre-Closure ಮಾಡಬೇಡಿ – ಸಮಯಕ್ಕೆ ಪಾವತಿ ಮಾಡುತ್ತ ಇರಿ**. ಕೆಲವರು ಕೊನೆಯ ಬಾಕಿಯಿರುವ ಕೆಲವು EMIಗಳನ್ನು ಜೊತೆಗೆ ಕಟ್ಟಿ Loan Pre-Closure ಮಾಡುತ್ತಾರೆ. ಬದಲಾಗಿ ನಿಯಮಿತವಾಗಿ ಪಾವತಿಸುತ್ತಾ ಹೋಗುವುದರಿಂದ “consistent positive behaviour” history ಆಗಿ ಸ್ಕೋರ್ ಬೆಳೆಯುತ್ತದೆ.
- **ಒಬ್ಬರಿಂದ ಹೆಚ್ಚು authorised users ಆಗಿ add ಆಗಬೇಡಿ.** ನೀವು ಬೇರೆ ಯಾರಾದರೂ ಕ್ರೆಡಿಟ್ ಕಾರ್ಡ್‌ಗಳಲ್ಲಿ authorised user ಆಗಿದ್ದರೆ, ಅವರ ತಪ್ಪುಗಳು ನಿಮ್ಮ ಸ್ಕೋರ್ ಮೇಲೆ ಪರಿಣಾಮ ಬೀರುತ್ತದೆ. ನಂಬಿಗಸ್ತ ವ್ಯಕ್ತಿಗಳ ಕ್ರೆಡಿಟ್ ಕಾರ್ಡ್‌ಗಳಿಗೆ ಮಾತ್ರ authorised users ಆಗಿ.
- **ಸಾಲದ Settlement ಮಾಡಬೇಡಿ – ಪೂರ್ತಿ ಪಾವತಿ ಮಾಡಿ.** Loan Settlement ಅಂದರೆ ಸಾಲದ ಉಳಿದಿರುವ ಮೊತ್ತವನ್ನು ಸಂಪೂರ್ಣವಾಗಿ ತೀರಿಸುವಲ್ಲಿ ಅಸಮರ್ಥರಾಗಿರುವಾಗ, ಸಾಲಗಾರ ಮತ್ತು ಬ್ಯಾಂಕು ಒಂದು Lump sum settlementಗೆ ಒಪ್ಪಿಕೊಳ್ಳುವುದು. ಆದರೆ ಇದು ನಿಮ್ಮ CIBIL ವರದಿಯಲ್ಲಿ “settled” ಎಂದು ತೋರಿಸಿ ಸ್ಕೋರ್‌ಗೆ ತುಂಬಾ ಕೆಟ್ಟ ಪರಿಣಾಮ ಬೀರುತ್ತದೆ. ಆದ್ದರಿಂದ ನಿಮ್ಮ ಸಾಮರ್ಥ್ಯಕ್ಕೆ ಮೀರಿದ ಸಾಲಗಳನ್ನು ಮಾಡಬೇಡಿ.
- **ಕ್ರೆಡಿಟ್ inquiries ಗುರಿಯಾಗದಿರಿ.** ನಿಮ್ಮ ಮೇಲೆ ಬ್ಯಾಂಕ್‌ಗಳು ಅಥವಾ NBFC ಗಳು "hard inquiry" ಮಾಡಿದರೆ (loan/credit card ಅರ್ಜಿಗೆ ಸಂಬಂಧಪಟ್ಟಂತೆ), ಅದು ಸ್ಕೋರ್ ತಗ್ಗಿಸಬಹುದು. ಕನಿಷ್ಠ 3-6 ತಿಂಗಳ ಅಂತರದಲ್ಲಿ Loan ಹೊಸ ಅರ್ಜಿ ಸಲ್ಲಿಸಿ.

### ಚಿಂತನಾ ಅಂಶ

**CIBIL SCORE ನಿಮ್ಮ ಹಣಕಾಸಿನ ಪಾಸ್‌ಪೋರ್ಟ್.** ಮನೆ ಖರೀದಿ, ಉದ್ಯಮ ಪ್ರಾರಂಭ, ಅಥವಾ ಉತ್ತಮ ಕ್ರೆಡಿಟ್ ಕಾರ್ಡ್ ಪಡೆಯಬೇಕಾದರೂ, ಈ ಮೂರು ಅಂಕಿಗಳ ಅಂಕೆ ನಿಮ್ಮ ಭವಿಷ್ಯವನ್ನು ನಿರ್ಧರಿಸಬಹುದು. **ಇದನ್ನು ನಿಮ್ಮ ಆಸ್ತಿಯೆಂದು ತಿಳಿಯಿರಿ, ಸುಧಾರಿಸಿರಿ, ಮತ್ತು ರಕ್ಷಿಸಿರಿ.**



ಸಿ ಎ ವಿಶ್ರಾಂತ್ ಬಿ ಎಲ್
ಬೆಂಗಳೂರು



## ಸಂಪಾದಕ ವಾಣಿ

# **ನಾರಾಯಣ** ಶೆಟ್ಟಿಗಾರ್

ಸೂತಪುರಾಣಿಕರು ಋಷಿಗಳನ್ನು ಕುರಿತು ಹೀಗೆ ಹೇಳಿದರು:

“ಎಲೈ ಋಷಿಗಳಿರಾ, ಶ್ರೀ ಸತ್ಯನಾರಾಯಣ ವ್ರತವನ್ನು ಹಿಂದೆ ಅದಾರು ಮಾಡಿದ್ದರೆನ್ನುವುದನ್ನು ನಿಮಗೆ ಹೇಳುತ್ತೇನೆ, ಕೇಳಿರಿ. ಕಾಶಿಪಟ್ಟಣದಲ್ಲಿ ದಟ್ಟದರಿದ್ರನಾದ ಬ್ರಾಹ್ಮಣನೊಬ್ಬನಿದ್ದನು. ಕಡುಬಡತನದಿಂದ ಯಾವಾಗಲೂ ಹಸಿವೆ ನೀರಡಿಕೆಗಳಿಂದ ಬಳಲುತ್ತಿದ್ದ ಆ ಬ್ರಾಹ್ಮಣನು ಭಿಕ್ಷೆ ಬೇಡಿ ಕಷ್ಟದಿಂದ ಜೀವನ ನಿರ್ವಹಣೆ ಮಾಡುತ್ತಿದ್ದನು. ಇದನ್ನು ತಿಳಿದ ಭಗವಂತನು ಅವನ ಮೇಲೆ ಕರುಣೆ ಹೊಂದಿ, ಮುದಿ ಬ್ರಾಹ್ಮಣ ವೇಷ ತಾಳಿ ಅವನ ಮುಂದೆ ಬಂದು ಶ್ರೀ ಸತ್ಯನಾರಾಯಣ ವ್ರತವನ್ನು ಮಾಡುವುದರಿಂದ ಸಕಲ ದುಃಖಗಳು ಪರಿಹಾರವಾಗಿ, ಸುಖಪ್ರಾಪ್ತಿಯಾಗುತ್ತದೆ ಎಂದು ಹೇಳಿ, ಸತ್ಯನಾರಾಯಣ ವ್ರತದ ವಿಧಿವಿಧಾನಗಳನ್ನು ಅವನಿಗೆ ತಿಳಿಸಿ ಅಂತರ್ಧಾನನಾದನು. ಬಡ ಬ್ರಾಹ್ಮಣ ಅವನ ಮಾತಿನಲ್ಲಿ ವಿಶ್ವಾಸವಿರಿಸಿ, ಸತ್ಯನಾರಾಯಣ ವ್ರತವನ್ನು ಮಾಡುವ ಸಂಕಲ್ಪ ಮಾಡಿದನು. ಮರುದಿನ ಭಿಕ್ಷಾಟನೆಯಲ್ಲಿ ಅವನಿಗೆ ಎಂದಿಗಿಂತಲೂ ಹೆಚ್ಚಾಗಿ ಹಣ ಸಂಗ್ರಹಣೆಯಾಯಿತು. ಆ ಹಣದಿಂದ ಬ್ರಾಹ್ಮಣನು ತನ್ನ ಬಂಧುಗಳನ್ನು ಆಹ್ವಾನಿಸಿ, ಶ್ರೀ ಸತ್ಯನಾರಾಯಣ ವ್ರತವನ್ನು ನೆರವೇರಿಸಿದನು. ಸತ್ಯನಾರಾಯಣ ವ್ರತ ಮಾಡಿದ ಫಲಸ್ವರೂಪವಾಗಿ ಆ ಬ್ರಾಹ್ಮಣನು ಎಲ್ಲಾ ದುಃಖಗಳಿಂದ ವಿಮುಕ್ತನಾಗಿ ಸುಖ ಸಂಪತ್ತುಗಳನ್ನು ಹೊಂದಿದನು. ಮಾತ್ರವಲ್ಲ, ಅವನು ಪ್ರತಿ ತಿಂಗಳೂ ತಪ್ಪದೇ ಸತ್ಯನಾರಾಯಣ ವ್ರತ ಆಚರಣೆ ಮಾಡಿ, ಕೊನೆಗೆ ಪಾಪವಿಮುಕ್ತನಾಗಿ ಮೋಕ್ಷವನ್ನು ಹೊಂದಿದನು. ಹೀಗೆಂದು ಭಗವಂತನು ನಾರದರಿಗೆ ಹೇಳಿ, ಶ್ರೀ ಸತ್ಯನಾರಾಯಣ ವ್ರತವೇ ಭೂಲೋಕದ ಜನರ ದುಃಖ ನಿವೃತ್ತಿಗೆ ಮತ್ತು ಸುಖಪ್ರಾಪ್ತಿಗೆ ಉತ್ತಮ ಉಪಾಯವೆಂದು ಹೇಳಿದರು.”

“ಸತ್ಯನಾರಾಯಣ ವ್ರತವನ್ನು ಇನ್ನೂ ಯಾರು ಮಾಡಿದರು ಮತ್ತು ಈ ವ್ರತವು ಹೇಗೆ ಪ್ರಸಿದ್ಧಿ ಹೊಂದಿತು” ಎಂದು ಋಷಿಗಳು ಕೇಳಲಾಗಿ, ಸೂತ ಪುರಾಣಿಕರು ಮುಂದುವರಿಸಿದರು:

“ಋಷಿಗಳೇ, ಕಟ್ಟಿಗೆ ಮಾರುವವನೊಬ್ಬನು ಕಟ್ಟಿಗೆಯನ್ನು ಹೊತ್ತುಕೊಂಡು ಮೊದಲು ದರಿದ್ರನಾಗಿದ್ದ ಬ್ರಾಹ್ಮಣನ ಮನೆಯ ಬಾಗಿಲಿಗೆ ಬಂದನು. ಬಾಯಾರಿಕೆ ತೀರಿಸಿಕೊಳ್ಳಲು ಬ್ರಾಹ್ಮಣನ ಮನೆ ಪ್ರವೇಶ ಮಾಡಿ ನೀರು ಕೇಳಿದನು. ಅಲ್ಲಿ ನಡೆಯುತ್ತಿರುವ ಸತ್ಯನಾರಾಯಣ ವ್ರತವನ್ನು ನೋಡಿ, ಭಕ್ತಿಭಾವದಿಂದ ಅಲ್ಲಿ ನಡೆಯುತ್ತಿರುವ ವ್ರತದ ಬಗ್ಗೆ ವಿವರ ತಿಳಿಸುವಂತೆ ಕೇಳಿಕೊಂಡನು. ಆಗ ಬ್ರಾಹ್ಮಣನು ತಾನು ಸತ್ಯನಾರಾಯಣ ವ್ರತ ಮಾಡುತ್ತಿರುವುದಾಗಿಯೂ, ವ್ರತದ ಫಲವಾಗಿ ದಟ್ಟದರಿದ್ರನಾಗಿದ್ದ ತನಗೆ ಸಂಪತ್ತು ಪ್ರಾಪ್ತಿಯಾಗಿರುವುದಾಗಿಯೂ ತಿಳಿಸಿದನು. ಕಟ್ಟಿಗೆ ಮಾರುವವನು ಬಯಸಿದಂತೆ ಆ ವ್ರತ ಮಾಡುವ ವಿಧಾನವನ್ನೂ ಅವನಿಗೆ ಹೇಳಿದನು. ಕಟ್ಟಿಗೆ ಮಾರುವವನು ಸಂತೋಷದಿಂದ ಪ್ರಸಾದ ಸ್ವೀಕಾರ ಮಾಡಿ, ನೀರು ಕುಡಿದು, ಊಟ ಮಾಡಿ ಅಲ್ಲಿಂದ ಹೊರಟನು. ‘ದೇವರೇ, ಕಟ್ಟಿಗೆ ಮಾರಿ ಬಂದ ಹಣದಿಂದ ನಿನ್ನ ವ್ರತವನ್ನು ಮಾಡುವೆ’ನೆಂದು ಸಂಕಲ್ಪ ಮಾಡಿಕೊಂಡನು. ಆ ದಿನ ಅವನಿಗೆ ಎಂದಿಗಿಂತಲೂ ಎರಡು ಪಟ್ಟು ಹೆಚ್ಚು ಹಣ ಸಂಪಾದನೆಯಾಯಿತು. ಅವನು ಸಂತಸಪಟ್ಟು ತನ್ನ ಬಂಧುಬಾಂಧವರನ್ನು ಕರೆಸಿ ಸತ್ಯನಾರಾಯಣ ವ್ರತವನ್ನು ವಿಧಿವತ್ತಾಗಿ ನೆರವೇರಿಸಿ, ಪ್ರಸಾದ ಸ್ವೀಕಾರ ಮಾಡಿದನು. ಆ ವ್ರತದ ಪ್ರಭಾವದಿಂದ ಮಕ್ಕಳನ್ನೂ ಧನವನ್ನೂ ಪಡೆದನು. ಇಹಲೋಕದಲ್ಲಿ ಸುಖವನ್ನುಂಡು ಕೊನೆಗೆ ಮೋಕ್ಷವನ್ನು ಹೊಂದಿದನು.”

ಇಲ್ಲಿಗೆ ಶ್ರೀ ಸ್ಕಂದ ಪುರಾಣದಲ್ಲಿ ಹೇಳಲಾದ ಶ್ರೀ ಸತ್ಯನಾರಾಯಣ ದೇವರ ಕಥೆಯ ಎರಡನೆಯ ಅಧ್ಯಾಯವು ಮುಗಿಯಿತು ಎಂದು ಸೂತಪುರಾಣಿಕರು ಹೇಳಿದರು.

***

ಕಳೆದ ವರ್ಷ ಜುಲೈ ತಿಂಗಳಲ್ಲಿ ಪ್ರಕಟವಾದ ನಮ್ಮ ಪತ್ರಿಕೆಯ ಪ್ರಥಮ ಸಂಚಿಕೆಯಲ್ಲಿ ಶ್ರೀ ಸತ್ಯನಾರಾಯಣ ದೇವರ ಕಥೆಯ ಮೊದಲನೆಯ ಅಧ್ಯಾಯವನ್ನು ಪ್ರಸ್ತಾಪ ಮಾಡಿದ್ದೆ. ಇದು ನಮ್ಮ ದ್ವಿತೀಯ ಸಂಪುಟದ ಪ್ರಥಮ ಸಂಚಿಕೆಯಾದುದರಿಂದ ಶ್ರೀದೇವರ ಕಥೆಯ ದ್ವಿತೀಯ ಅಧ್ಯಾಯದ ಪ್ರಸ್ತಾಪ ಮಾಡಬೇಕೆನಿಸಿತು. ಇದೇ ತಿಂಗಳ (ಜುಲೈ) 6ನೆಯ ದಿನಾಂಕದಂದು ನಮ್ಮ ಕೂಟದ ವತಿಯಿಂದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ನೆರವೇರಲಿದೆ. ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಆ ಪುಣ್ಯಕಾರ್ಯದಲ್ಲಿ ಭಾಗವಹಿಸಿ ಭಗವಂತನ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇವೆ. (ಹೆಚ್ಚಿನ ವಿವರಗಳಿಗೆ ಈ ಸಂಚಿಕೆಯ ಕೊನೆಯ ಪುಟ ನೋಡಿ.)



AI generated image: No photo credits required

# ದಿಟವಿದು ಏಕಾಂತ

ಕಾಡುತಿದೆ-ಕಾಡುತಿದೆ ತನ್ನ ಬಿಡದೆ ಏಕಾಂತ-ವನ;
ನಡುರಾತ್ರಿಯ ಬಣಗುಟ್ಟುವ ಕತ್ತಲೊದೆತದಲಿ;
ಕಾಡುತಿದೆ-ಕಾಡುತಿದೆ ನನ್ನ ಬೆಂಬಿಡದೆ ಏಕಾಂಗಿತನ;

ಚಳಿಗಾಲದ ಕಲಿಚಳಿಯೋ, ಬಿಸಿಲಾಳದ ಸುಡುಬಿಸಿಲೋ
ಚಳಿ,ಮಳೆ,ಬಿಸಿಲು ಎಂಬೀ ವ್ಯಸನಾಂತರವ ತೊರೆದೊಯ್ದು ಎಡೆಬಿಡದೆ;
ಕಾಡುತಿದೆ - ಕಾಡುತಿದೆ ತನ್ನ ಬಿಡದೆ ಏಕಾಂಗಿತನ!

ತಾಯೊಡಲ ಕಾನನದಿ ಧರೆಗಿಳಿದ ಎಲೈ ಮನವೇ, ನೀನು ಏಕಾಂಗಿ!
ಮರೆಯದಿರು! ತಪ್ತ-ಸುಪ್ತ ಸುಧೆಯೊಳ ಮಿಂದೆದ್ದ ನೀನೇ ಏಕಾಂಗಿ - ದಿಟವೂ!

ನಿನ್ನ ತುಡಿತ ಸರಿಯಾದುದೇ -
ಸುಜ್ಞಾನ ಸುಖಾಂತ ನೈಜ ನೆಲೆಯೇ ಏಕಾಂತವೂ;
ಗೊಂದಲವ ಚದುರೆದ್ದು, ಅಂದು-ಇಂದು ಅರಿವಳಿಕೆಯಲ್ಲಿದ್ದು;

ಸ್ಥಿತಪ್ರಜ್ಞ ನಿಶ್ಚಲತೆಯಲ್ಲಿ; ಮುಂದೊಂದ ದಿನದ ಆಯತ -
ಆತುರದಿಂದ, ಕ್ಷಣಕ್ಷಣವೂ ಪರಿಪೂರ್ಣವಾಗುತಿರು - ಏಕಾಂತದೆಸೆಗೆ,
ಎಲೈ ಮನವೇ, ಏಕಾಂತದೆಸೆಗೆ ........!



**ಎಕ್ಕಾರ್ ಡಿ. ಪಿ. ಶೆಟ್ಟಿಗಾರ್**
**ಶೇಷಾದ್ರಿಪುರಂ, ಬೆಂಗಳೂರು**

# ಚುಟುಕು ಗುಟುಕು

ಒಮ್ಮೊಮ್ಮೆ ನೀರಿಗೂ
ಕಚಗುಳಿಯಾಗುತ್ತೆ
ನೀರೆಯರು ನೀರೊಳಗೆ
ಕೈಬಿಟ್ಟಾಗ !
***
ಉದ್ರೇಕಗೊಂಡ
ಹುಣ್ಣಿಮೆ ಚಂದ್ರ
ಪ್ರೇಮಿಗಳ ಕಿಟಿಕಿಲಿ
ಹೆಚ್ಚು ಇಣುಕುತ್ತಾನೆ
***
ಹಗಲು ದುಡಿದು
ಸುಸ್ತಾದ ರಸ್ತೆ
ರಾತ್ರಿ ನಿದ್ದೆ ಬರಲು
ಕುಡುಕರ ಜೋಗುಳ
ಕಾಯುತ್ತಿರುತ್ತದೆ
***
ಲತೆ ಹೆಣ್ಣು ಅಂತೀವಿ
ಮತ್ತ್ಯಾಕೆ ಅದು
ಮರವನ್ನು ಹತ್ತುತ್ತದೆ?!
***
ರಾತ್ರಿಯೆಲ್ಲಾ
ತಾರೆಯರ ಜೊತೆ
ರಮಿಸಿದ ಚಂದ್ರನ
ಬೆವರೇ ಇಬ್ಬನಿ!?
***
ಮನೆ ಒಳಗೊಂದು
ಹೊರಗೊಂದು ಗುಲಾಬಿ
ಇಬ್ಬರಿಗೂ ಒಬ್ಬನೆ
ಮಾಲಿ, ಮಾಲೀಕ
***
ನನ್ನವಳಿಗೆ ಬೆಂಡೆ ಇಷ್ಟ
ಅದರ ಲೋಲೆಯಿಂದ
ಅವಳ ನಾಲಿಗೆ ಚೆನ್ನಾಗಿ
ತಿರುಗುವುದಂತೆ!

AI generated image: No photo credits required



**ನರೇಂದ್ರ ಕಬ್ಬಿನಾಲೆ**
**ಉಡುಪಿ**



AI generated image: No photo credits required

# ಉತ್ತೇಜಿಸು

ಭಗವಂತನೆ ನೀ ನನ್ನ ಬರಹವ ಉತ್ತೇಜಿಸಿ ನಾ ಕವಿಯಾದೆ
ಬಾಲ್ಯದಿ ಪ್ರಕೃತಿಯ ಅರಿವ ತಿಳಿಸಿ ಪ್ರಕೃತಿ ಆರಾಧಕಳಾದೆ
ಪರೋಪಕಾರಿ ತನವ ನೀ ಉತ್ತೇಜಿಸಿ ನಿಸ್ವಾರ್ಥಿಯಾದೆ
ನೊಂದವರ ಮನಕೆ ಸ್ಪಂದಿಸುವ
ಸಮಾಜ ಸೇವಕಳಾದೆ

ಭಜನೆಯ ಸುಯೋಗದಿ ಮನಸ್ಥಿರ ಕರುಣಿಸಿ ನಿನ್ನ ಭಕ್ತಳಾದೆ
ಬಾಳಪಥದಿ ಬದುಕ ಉತ್ತೇಜಿಸುವ ಭಗವಂತನೆ ನಾ ಶರಣಾದೆ.....



**ಅನುರಾಧ ಉದಯ್**
**ಉಡುಪಿ**

# ಕಲೆಯೊಳಗೆ

ಉರಿಯುವ ದೀವಟಿಗೆಗೆ
ಹಗಲಾಗಿದೆ ಇರುಳು.
ಶಂಖ ಜಾಗಟೆಯ ನಾದ
ದೇವನಿರುವ ಡೇರೆಯೊಳು.

ಮಾಸಿದ ಮುಖಕಮಲಕೆ
ನಿದ್ದೆಯ ಕನವರಿಕೆ.
ಬಣ್ಣ ಹಚ್ಚಿ ಕುಳಿತೊಡೆ
ದೇವನಿಗೆ ಮನವರಿಕೆ.

ರಕ್ಕಸನ ಆರ್ಭಟಕೆ
ಪ್ರವೇಶದ ಆತುರ.
ಚಂಡೆಗಳ ಏರಿಳಿತ
ಕೂಗುವ ಭಾಗವತರ ಸ್ವರ.

ಸೋಲು ಗೆಲುವಿನ ಕುಣಿತ
ನಗುಬೆರೆಸುವ ವಿದೂಷಕ.
ಸಿಳ್ಳೇ, ಚಪ್ಪಾಳೆಯನರಿತ
ಪ್ರೋತ್ಸಾಹವೀಯುವ ಪ್ರೇಕ್ಷಕ.

ಬೆಳಕು ಮೂಡಿದೆ ಇನ್ನು
ಮಂಗಳಾರತಿಯ ಸಂಪನ್ನ.
ಹೊರಡಬೇಕಿದೆ ಊರಿಗೆ
ದೇವರಾಟ ಹರಸಿದೆ ಕಲೆಗೆ.



Photo by Sunil Kumar Photography, supplied by the author.



**ಜಗದೀಶರಾಂ ಶೆಟ್ಟಿಗಾರ್,**
**ಜಪ್ತಿ, ಕುಂದಾಪುರ**



AI generated image: No photo credits required

# ಮರ್ಯಾದೆ ಉಳಿಸಿದ ನಾಣ್ಯ

ಎಂಥ! ಬಿಸಿಲಪ್ಪ ಇದುವು ಎಂಥ! ಬಿಸಿಲೋ.......

ಎಂಥ ಬಿಸಿಲಾದ್ರೂ ಬಂಡಿ ಸಾಗಲೇ ಬೇಕು. ಹೊಟ್ಟೆ ತುಂಬಲೇ ಬೇಕು. ಆಗಲೇ ಬೇಕಾದ ಕೆಲಸ ಆಗಲೇ ಬೇಕು.

ಬ್ಯಾಂಕಿಗೆ ಹೋಗಿ ಬಾ ಎಂದು ಯಜಮಾನರೆಂದಾಗ ಯಾವುದಕ್ಕೂ ಹೆದರದೇ ಇದ್ದರೂ ಬಿಸಿಳಿಗೆ ಹೆದರುವ ನಾನು ಮನಸ್ಸಿಲ್ಲದ ಮನಸ್ಸಿನಿಂದ ಆಯಿತೆಂದು ಕುಂದಾಪುರ ಬಸ್ಸು ಹತ್ತಿದ್ದೆ. ಯಜಮಾನರಿಗೆ ಬೇರೆ ಯಾವುದೋ ಕೆಲಸವಿತ್ತು. ಜೊತೆಗೆ "ಅಮ್ಮಾ, ವೇರ್ ಯೂ ಆರ್ ಗೋಯಿಂಗ್?" ಎಂದು ರಾಗ ತೆಗೆದ ನನ್ನ ಬಾಲ ಬಾಲಕೃಷ್ಣ ನನ್ನ ಜೊತೆಗೆ ಹೊರಟೇ ಬಿಟ್ಟಿದ್ದೆ ಒಟ್ಟಿಗೆ. "ಬಸ್ಸಿನಲ್ಲಿ ಯಾವಾಗಲೂ ನಡುವಿನ ಆಸನದಲ್ಲಿ ವಿರಾಜಿಸಬೇಕು. ಬೇಡ ಮುಂದಿನ ಸೀಟು" ಎಂದರೆ ಪಕ್ಕ ಒಪ್ಪಿಕೊಳ್ಳುವ ಜಾಯಮಾನ ಬಾಲಕೃಷ್ಣನದ್ದಲ್ಲ. ಹೇಗೋ ಒಪ್ಪಿಸಿ ಮಧ್ಯದಾಸನದಲ್ಲಿ ಎಳೆದುಕೊಂಡೇ ಬಂದು ಕೂರಿಸಿದೆ. ಅದಾಗಲೇ ಬಸ್ಸು ಹೊರಟಾಗಿತ್ತು.

ಉಡುಪಿಯಿಂದ ಹೊರಟು ಕುಂದಾಪುರ ಬ್ಯಾಂಕಿಗೇಕೆ ಅಂದ್ರಾ? ಕಾರಣ ಇಷ್ಟೇ, ಹಿಂದೆ ಅಲ್ಲಿಯೇ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾಗ ತೆರೆಯಲ್ಪಟ್ಟ ಅಕೌಂಟ್.

ಆಸನದ ಮೇಲೆ ಕುಳಿತು ಒಂದರಿಂದ ಇಪ್ಪತ್ತೈದು ಎಣಿಸಿದೆ ಕಣ್ಮುಚ್ಚಿ. ಬಳಿಕ ಕಣ್ತೆರೆದೆ. "ಟಿಕೇಟ್ ಟಿಕೇಟ್ ಟಿಕೇಟ್ ಟಿಕೇಟ್". ಎರಡು ಆಸನದಾಚೆ ನಿಂತಿದ್ದರು ಕಂಡಕ್ಟರ್.

ಟಿಕೇಟಿನ ಹಣ ತೆಗೆಯಲು ಮುಂದಾಗಿ ಕೈಯಲ್ಲಿದ್ದ ಬ್ಯಾಗ್ ತೆರೆದವಳು ಬೆಚ್ಚಿ ಬಿದ್ದೆ. ಒಂದೇ ಒಂದು ರೂಪಾಯಿ ನೋಟು ಇಲ್ಲ ಹತ್ತು ರೂಪಾಯಿಯ ಒಂದು ನೋಟು ಬಿಟ್ಟು. ಆಗಲೇ ನೆನಪಾಗಿದ್ದು ಹಿಂದಿನ ದಿನ ಮಾಡಿದ್ದ ಎಡವಟ್ಟು.

ಹೊತ್ತ ಹೆಗಲ ಚೀಲವನ್ನೇ ಹೊರುವುದೇಕೆಂದು ಹಿಂದಿನ ದಿನ ಹೋಗಿದ್ದ ಕಾರ್ಯಕ್ರಮಕ್ಕೆ ಬ್ಯಾಗ್ ಬದಲಾಯಿಸಿದ್ದೆ. ಈ ಚೀಲದಲ್ಲಿದ್ದ ನೋಟುಗಳೆಲ್ಲ ಆ ಚೀಲದೊಳಗೆ ಸೇರಿಕೊಂಡಿವೆ ಎಟಿಎಮ್ ಕಾರ್ಡ್ ಸಮೇತ. ಗೂಗಲ್ ಪೇ ಮಾಡಲು ಆ ವ್ಯವಸ್ಥೆ ಇದ್ದ ಮೊಬೈಲ್ ಕೂಡ ಮನೆಯಲ್ಲೇ ಇತ್ತು. ಅವಸರವಸರಕ್ಕೆ ಮಾಡಿದ್ದ ಎಡವಟ್ಟು, ಆ ರೀತಿ ಯಾವತ್ತೂ ಮಾಡಿರಲಿಲ್ಲ. ಇವತ್ತು, ಛೇ! ನಾಲ್ಕೈದು ಅರೆಗಳನ್ನು ತಡಕಾಡಿದೆ. ಪ್ರಯೋಜನವೇ ಇಲ್ಲ.

ಮತ್ತೆ ಇಣುಕಿದಾಗ ಕಂಡಿದ್ದು ಹೊನ್ನಿನ ಬಣ್ಣದ ಹತ್ತರ ನಾಣ್ಯಗಳು. ನಾಲ್ಕೈದು. ಅಯ್ಯಬ್ಬ! ಅಂದುಕೊಂಡು ಕುಳಿತವಳಿಗೆ ಕಂಡಿದ್ದು "ಅಮ್ಮ, ವೇರ್ ವಿ ಆರ್ ಗೋಯಿಂಗ್ ನವ್" ಎಂದು ರಾಗ ತೆಗೆದ ಬಾಲ.

"ಎಲ್ಲಿಗಿಲ್ಲ, ಸ್ವಲ್ಪ ಹೊತ್ತು ಮಾತಾಡ ಬೇಡ" ಎಂದು ಗದರಿದವಳಿಗೆ ಪಕ್ಕ ತಲೆಯೊಳಗೆ ನುಸುಳಿದ ವಿಷಯ "ನನ್ನ ಮಗನಿಗೂ ಟಿಕೇಟ್ ತೆಗೆದುಕೊಳ್ಳಲಿದೆ" ಎಂಬುದು. ಟಿಕೇಟ್ ಕೊಳ್ಳಲೇ ಬೇಕು. ಆದರೆ.....

ನಾಣ್ಯಗಳ ಸದ್ದು ಎಲ್ಲೆಡೆ ಕೇಳಿದಂತಾಯ್ತು. ನೋಟಿನ ಕಂತೆ ನೋಡಿ ಜೊಲ್ಲು ಸುರಿಸುವವಳು ನಾನಲ್ಲದಿದ್ದರೂ ಈ ನಾಣ್ಯ ಅಂದರೆ ಸ್ವಲ್ಪ ಅಸಡ್ಡೆ ಹೊಂದಿದ್ದನ್ನು ಅಲ್ಲಗಳೆಯುವಂತಿಲ್ಲ. ಎರಡು ಟಿಕೇಟ್ ಉಡುಪಿಯಿಂದ ಬೀಜಾಡಿ. 54 ಕೂಡಿಸು 54. ನೂರ ಎಂಟು ರೂಪಾಯಿ. ಹತ್ತರ ಐದು ನಾಣ್ಯ ಹತ್ತರ ಒಂದು ನೋಟು. ಒಟ್ಟಿಗೆ ಅರವತ್ತು ರೂಪಾಯಿ. ಮತ್ತೆ ತಡಕಾಡಿದೆ ಐದರ ಎಂಟು ನಾಣ್ಯ ಸಿಕ್ಕಿತು. ನೂರಾಯಿತು.

ಅರರೆ! ಎರಡರ ನಾಲ್ಕು ನಾಣ್ಯ ಬೇರೆ ಇದೆ. ಎರಡು ಟಿಕೇಟ್ ಹಣ ಕೈಯಲ್ಲಿ. ಒಂದು ಬೊಗಸೆ ತುಂಬ ನಾಣ್ಯ. ಹತ್ತರದೊಂದು ನೋಟು. ಕೊಡಲು ಮುಜುಗರ - ನಾಚಿಕೆ.

ಬಂದೇ ಬಿಟ್ರು ಕಂಡಕ್ಟರ್.

"ತಪ್ಪು ತಿಳಿಯಬೇಡಿ. ಒಂದಷ್ಟು ನಾಣ್ಯ ಇದೆ ಕೊಡ್ಲಾ" ಎಂದೆ.

ಕಂಡಕ್ಟರ್ ಮೊಗ ಅರಳಿತು. "ಬೆಳಿಗ್ಗೆಯಿಂದ ಚಿಲ್ಲರೆ ಸಮಸ್ಯೆ ಮಾರಾಯ್ರೆ.. ಕೊಡಿ ಕೊಡಿ" ಎಂದಾಗ ಹೇಳಲಾಗದ ಖುಷಿ ನನಗೆ.

"ಅಯ್ಯೋ! ಈ ನೋಟೊಂದು ಬೇಡ. ಹರಿದಿದೆ" ಎನ್ನುವುದೇ ಹತ್ತು ರೂಪಾಯಿ ಹಿಂದೆ ಕೊಟ್ಟು! ನನ್ನ ಮುಖ ಬಾಡುವುದಕ್ಕೆ ಆರಂಭವಾಯಿತು. ತೋರಿಸದೇ "ಇಲ್ಲ, ಇಲ್ಲ ಸರಿಯಿದೆ" ಎಂದೆ.

"ನೋಡಿ ಮೇಡಂ ಹರಿದಿದೆ" ಎಂದ.

ಆತ ಸುಳ್ಳು ಹೇಳಿಲ್ಲ. ಹರಿದಿದೆ. ಹಿಂದೆ ಪಡೆದು ಮತ್ತೆ ಬ್ಯಾಗಿನ ಒಳಗೆ ಹಾಕಿ 'ಕೊಡ್ತೇನೆ' ಎಂದಾಗ ಆತ 'ಬರ್ತೇನೆ ಈಗ' ಎಂದು ಕೈ ತಿರುಗಿಸಿ ಮುಂದೆ ಟಿಕೇಟು ಕೊಡಲು ಹೋದರು.

ಕೈಯಲ್ಲಿ ಈಗ ಇದ್ದದ್ದು 98 ರೂಪಾಯಿ. ಇನ್ನು ಹತ್ತು ರೂಪಾಯಿ ಬೇಕು. ಎಲ್ಲಿಗೆ ಹೋಗಲಿ. ಚೀಲದ ಇನ್ನೊಂದು ಭಾಗಕ್ಕೆ ಕೈ ಹೋಯಿತು. ಅಲ್ಲಿದ್ದ ನಾಣ್ಯ ಲೆಕ್ಕ ಹಾಕಿದೆ. ಸರಿಯಾಗಿ ಹತ್ತು ರೂಪಾಯಿ ಐವತ್ತು ಪೈಸೆ ಇದೆ. ಅಯ್ಯಬ್ಬ! ಎಂದು ಐವತ್ತು ಪೈಸೆ ಅಲ್ಲೇ ಇಟ್ಟು ನೂರೆಂಟು ರೂಪಾಯಿ ಕಂಡೆಕ್ಟರ್ ಕೈಯಲ್ಲಿಟ್ಟೆ. ಆ ಪುಣ್ಯಾತ್ಮ ಲೆಕ್ಕ ಮಾಡಿ ಏಳು ರೂಪಾಯಿ ಕಡಿಮೆ ಇದೆ ಎನ್ನುವುದೇ? ಒಂದು ಕ್ಷಣ ಕುಸಿದರೂ ಮತ್ತೆ ಎಣಿಸಿ ಬೇರೆ ಬೇರೆಯಾಗಿ ಕೊಟ್ಟೆ. ನನ್ನ ಲೆಕ್ಕ ಸರಿಯಿತ್ತು. ಐವತ್ತು ಪೈಸೆ ಬ್ಯಾಗ್ ಒಳಗೆ ನಗುತ್ತಿತ್ತು.

ಟಿಕೇಟ್ ಸಮಸ್ಯೆ ಬಗೆ ಹರಿದ ಮೇಲೆ ಸುತ್ತ ನೋಡಿದೆ. ಏನೋ! ಪುಣ್ಯ ಮಾಡಿದ್ದೇನೆ ಇರಬೇಕು. ಆ ದಿನ ಪ್ರಯಾಣಿಕರು ಕಡಿಮೆ ಇದ್ದರು.

ಬ್ಯಾಗಿನೊಳಗೆ ಮತ್ತೆ ಕೈ ಹಾಕಿ ನೋಡಿ ಚಿಕ್ಕಮ್ಮನಿಗೆ ವಿಷಯ ತಿಳಿಸಿದೆ. ಬಸ್ಸಿನಿಂದ ಇಳಿಯುವ ಹೊತ್ತಿಗೆ ಚಿಕ್ಕಪ್ಪ ಎದುರಿದ್ದರು. ರಿಕ್ಷಾದಲ್ಲಿ ಅವರ ಮನೆಗೆ ಹೋಗಿ ಊಟ ಮುಗಿಸಿ ಬ್ಯಾಂಕಿಗೆ ಹೊರಡುವಾಗ ಚಿಕ್ಕಮ್ಮ ಅನ್ವಿತ್ ಹುಟ್ಟಿದ್ದ ಹಬ್ಬಕ್ಕೆಂದು ಎರಡು ಸಾವಿರ ಕೊಟ್ಟರು ಅವನ ಕೈಯ್ಯಲ್ಲಿ. ಬ್ಯಾಂಕ್ ಹತ್ತಿರ ಹೋದಾಗಲೇ ಅರಿವಾಗಿದ್ದು ಅಂದು ಬ್ಯಾಂಕಿಗೆ ರಜೆಯೆಂದು.

ಚಿಕ್ಕಮ್ಮ ಕೊಟ್ಟ ಎರಡು ಸಾವಿರ ಧೈರ್ಯ ತುಂಬಿತ್ತು!



**ಶೋಭಾ ಹರಿಪ್ರಸಾದ ಶೆಟ್ಟಿಗಾರ**
**ಉಡುಪಿ**






**ಯತೀಶ್ ಎಲ್. ಶೆಟ್ಟಿಗಾರ್,**
**ಸಿದ್ಧಕಟ್ಟೆ ,**
**ವಿದ್ಯಾರಣ್ಯಪುರ, ಬೆಂಗಳೂರು**




A still from the movie 'Pefect Days'

# 'ಪರ್ಫೆಕ್ಟ್ ಡೇಸ್'
# ಪರಿಪೂರ್ಣ ದೈನಂದಿನ ಜೀವನದ ದೃಶ್ಯ ದರ್ಶನ

'Next time is next time. Now is now...'(ನಾಳೆ ನಾಳೆಗೆ, ಇಂದು ಇಂದಿಗೆ ...), ಇದು ಡಿಸೆಂಬರ್ 2023ರಲ್ಲಿ ತೆರೆಕಂಡ ಜಪಾನೀಸ್ ಭಾಷೆಯ 'ಪರ್ಫೆಕ್ಟ್ ಡೇಸ್'(ಪರಿಪೂರ್ಣ ದಿನಗಳು) ಸಿನೆಮಾದಲ್ಲಿರುವ ಮುಖ್ಯ ಪಾತ್ರದ ಜೀವನ ತತ್ವ. ಅಂದರೆ, ಈ ಸಿನೆಮಾ, ನಿನ್ನೆ ಮತ್ತು ನಾಳೆಗಳ ಹಂಗಿಲ್ಲದೆ, ಆಯಾಯ ಕ್ಷಣಗಳಲ್ಲಿ ಬದುಕುವ ಪಾತ್ರದ ಚಿತ್ರಣ ನೀಡುತ್ತದೆ. ಜರ್ಮನ್ ಭಾಷೆಯ ಸಿನೆಮಾ ನಿರ್ದೇಶಕ ವಿಮ್ ವೆಂಡರ್ಸ್ ನಿರ್ದೇಶಿಸಿದ ಈ ಸಿನೆಮಾದಲ್ಲಿ ಪ್ರಸಿದ್ಧ ಜಪಾನೀ ನಟ ಕೋಜಿ ಯಕುಶೋ ಪ್ರಧಾನ ಪಾತ್ರ ನಿರ್ವಹಿಸಿದ್ದು, ಟೋಕಿಯೋದ ಸಾರ್ವಜನಿಕ ಶೌಚಾಲಯಗಳಲ್ಲಿ ಸ್ವಚ್ಛತಾ ಕಾಯಕ ಮಾಡುತ್ತಿರುವ 'ಹಿರಾಯಮಾ' ಆಗಿ ಶ್ರೇಷ್ಠ ಅಭಿನಯ ನೀಡಿದ್ದಾರೆ.

'ಪರ್ಫೆಕ್ಟ್ ಡೇಸ್', ದೈನಂದಿನ ಜೀವನದ ಸಹಜತೆ ಮತ್ತು ಸರಳತೆಯನ್ನು ನಿರ್ಲಿಪ್ತತೆಯಿಂದ ಚಿತ್ರಿಸಿದ ಸಿನೆಮಾ. ಸಾಮಾನ್ಯವಾಗಿ, ನಾವು ಜೀವನದ ಕೆಲವು ವಿಶೇಷ ಕ್ಷಣಗಳ ನಿರೀಕ್ಷೆಯಲ್ಲಿ ಕಳೆದುಹೋಗಿ, ದಿನ ನಿತ್ಯದ ಬದುಕಿನ ಸೂಕ್ಷ್ಮ ಅಂಶಗಳತ್ತ ಗಮನಹರಿಸುವುದನ್ನು ಮರೆತು ಬಿಡುತ್ತೇವೆ. ಅವುಗಳನ್ನು ನಾವು ವಿಶೇಷವೆಂದು ಪರಿಗಣಿಸದೆ ಇರುವುದರಿಂದ ಅವುಗಳು ನಮ್ಮ ನಿರ್ಲಕ್ಷ್ಯಕ್ಕೆ ಒಳಗಾಗುತ್ತವೆ. ಈ ಹಿನ್ನೆಲೆಯಲ್ಲಿ, ನಮ್ಮ ಬದುಕು ವರ್ತಮಾನದಲ್ಲಿದೆ, ಅದು ಕೂಡ ಪ್ರತಿ ಕ್ಷಣ ಮನಃಪೂರ್ವಕವಾಗಿ ಸಂಪೂರ್ಣ ಪ್ರಜ್ಞೆಯೊಂದಿಗೆ ದೈನಂದಿನ ಚಟುವಟಿಕೆಗಳಲ್ಲಿ ನಮ್ಮ ದೇಹ ಮತ್ತು ಮನಸ್ಸನ್ನು ತೊಡಗಿಸಿಕೊಂಡು ಬದುಕುವುದರಲ್ಲಿದೆ, ಎನ್ನುವುದನ್ನು, 'ಪರ್ಫೆಕ್ಟ್ ಡೇಸ್' ಹೇಳುವ ಮೂಲಕ ವಿಶೇಷವೆನಿಸುತ್ತದೆ. ಇಲ್ಲಿ, ಪ್ರತಿದಿನಗಳು ಹೆಚ್ಚು ಕಡಿಮೆ ವ್ಯತ್ಯಾಸಗಳಿಲ್ಲದೆ ಪುನರಾವರ್ತನೆಯಾಗುತ್ತಿರುತ್ತವೆ. ಆದರೂ ಈ ಒಂಟಿ ಹಿರಿಯ ಜೀವದ ಮುಖದಲ್ಲಿ ಚೈತನ್ಯ ಮಾಸುವುದಿಲ್ಲ. ಹಿರಾಯಮಾ ನಸುನಗುತ್ತಲೇ, ಒಂದಿಷ್ಟು ಬೇಸರ ತೋರ್ಪಡಿಸದೆ ತನ್ನ ಕಾಯಕದಲ್ಲಿ ಮೈಮರೆಯುತ್ತಾನೆ, ಅವನು ತನ್ನ ನಿಗದಿತ ದಿನಚರಿಗೆ ಸಂಪೂರ್ಣ ಬದ್ಧನಾಗಿದ್ದಾನೆ.

ಅವನು ಶೌಚಾಲಯ ಸ್ವಚ್ಛ ಮಾಡುವಾಗ ತೋರುವ ಶ್ರದ್ಧೆ ನಮಗೆ ಮುಲ್ಕ್ ರಾಜ್ ಆನಂದ್ ಬರೆದ ಇಂಗ್ಲಿಷ್ ಕಾದಂಬರಿ 'ದಿ ಅನ್ ಟಚೆಬಲ್' ನ ಮುಖ್ಯ ಪಾತ್ರದಾರಿ ಬಾಕ ನೆನಪಾಗುತ್ತಾನೆ. ತಾನು ಮಾಡುತ್ತಿರುವುದು ಸಮಾಜದಲ್ಲಿ ನಿಕೃಷ್ಟವೆಂದು ಪರಿಗಣಿಸಲ್ಪಟ್ಟಿದ್ದರೂ ಬಾಕ ಅದನ್ನೊಂದು ಧ್ಯಾನವೆಂಬಂತೆ ಮಾಡುತ್ತಾನೆ. ಅವನನ್ನು ಸುತ್ತಲಿನ ಜನರೇನೂ ಗೌರವದಿಂದ ಕಾಣದಿದ್ದರೂ, ತಲೆಕೆಡಿಸಿಕೊಳ್ಳದೆ ತನ್ನದೇ ಪ್ರಪಂಚದಲ್ಲಿ ಆನಂದ ಕಾಣುತ್ತಾನೆ. ಅದೇ ರೀತಿ, ಹಿರಾಯಮಾ ಕೂಡ ಬಹಳ ಕಡಿಮೆ ಮಾತನಾಡುತ್ತಾನೆ. ಅವನ ಶೌಚಾಲಯ ತೊಳೆಯುವ ಕಾಯಕದ ಶ್ರದ್ಧೆ ಯಾವ ದೈವಾರಾಧನೆಗೆ ಕಡಿಮೆಯಿಲ್ಲವೆನ್ನಬಹುದು. ಒಂದೆರಡು ದೃಶ್ಯಗಳಲ್ಲಿ ಹಿರಾಯಮಾ ಅಳುವುದನ್ನು ಹೊರತುಪಡಿಸಿದರೆ, ಅವನ ಮುಖದಲ್ಲಿ ಬುದ್ಧನ ಮಂದಹಾಸ ಗೋಚರಿಸುತ್ತದೆ. ಅವನಿಗೆ ಮನುಷ್ಯ ಲೋಕದ ನಂಟು ಕಡಿಮೆ, ಆದರೆ ಪ್ರಕೃತಿಯೊಂದಿಗೆ ಆಪ್ತ ಸಂಬಂಧವಿದೆ. ಇಡೀ ಸಿನೆಮಾದಲ್ಲಿಯೇ ಸಂಭಾಷಣೆಗಳು ಕಡಿಮೆಯಿವೆ, ಮಾತಿನ ಹಂಗಿಲ್ಲದೆಯೂ ಆತ್ಮತೃಪ್ತಿಯಿಂದ ಬದುಕಬಹುದೆನ್ನುವಂತೆ.

ಅವನ ದೈನಂದಿನ ಕಾಯಕವನ್ನು ಹೊರತುಪಡಿಸಿ ಪದೇ ಪದೇ ತೋರಿಸುವ ಇನ್ನೊಂದು ದೃಶ್ಯವೆಂದರೆ ಪಾರ್ಕಿನಲ್ಲಿ ದಟ್ಟವಾಗಿರುವ ಮರಗಳ ಎಲೆಗಳ ನಡುವೆ ತೂರಿಬರುವ ಸೂರ್ಯನ ಕಿರಣಗಳು (ಇದನ್ನು ಜಪಾನೀ ಭಾಷೆಯಲ್ಲಿ 'ಕೊಮೋರೇಬಿ' ಎನ್ನುತ್ತಾರೆ, ಇದು ಈ ಸಿನೆಮಾದ ಮೂಲ ಶೀರ್ಷಿಕೆಯೂ ಹೌದು). ನಮ್ಮ ಬದುಕು ಕೂಡ ಒಂದರ್ಥದಲ್ಲಿ ಹಾಗೆಯೆ ಇರುತ್ತದೆ, ಎಲ್ಲೊ ಕೆಲವೊಂದು ಬೆಳ್ಳನೆಯ ಆನಂದದ ಗಳಿಗೆಗಳನ್ನು ಹೊರತುಪಡಿಸಿದರೆ, ಉಳಿದೆಲ್ಲಾ ಬಹುತೇಕ ಕತ್ತಲೆಯೇ. ಹಿರಾಯಮಾ ಆ ಕ್ಷಣಗಳನ್ನು ತನ್ನ ಕ್ಯಾಮೆರಾದಲ್ಲಿ ಸೆರೆ ಹಿಡಿಯುವುದನ್ನು ಮರೆಯುವುದಿಲ್ಲ. ಇದನ್ನು ಅವನು ಪ್ರತಿ ಮಧ್ಯಾಹ್ನ ಊಟ ಮಾಡುವಾಗ ಮಾಡುತ್ತಾನೆ. ನಾವು ಕೂಡ ದಿನದ ಸಂತಸದ ಕ್ಷಣಗಳನ್ನು ಸ್ವೀಕರಿಸಿ ಬದುಕಿನ ಕತ್ತಲನ್ನು ಸಹಿಸಿಕೊಳ್ಳಬಹುದಲ್ಲವೇ?

ಹಿರಾಯಮಾನ ಈ ಉದಾತ್ತ ಲೋಕದೃಷ್ಟಿಯ ಮೂಲ ಅವನ ಹೃದಯದಲ್ಲಿ ಬೇರೂರಿದೆ. ಹಾಗಾಗಿ ಅವನ ಕಣ್ಣುಗಳಿಗೆ ತನ್ನ ಸುತ್ತಲಿನ ಜಗತ್ತಿನ ಚಿಕ್ಕ ಚಿಕ್ಕ ಅಂಶಗಳೂ ಕೂಡ ಕಾರುಣ್ಯದ ಬಾಗಿಲ ಮೂಲಕ ಸ್ಪಷ್ಟವಾಗಿ ಗೋಚರಿಸುತ್ತವೆ. ಉದಾಹರಣೆಗೆ, ಅವನು ಪ್ರತಿದಿನ ಗಮನಿಸುತ್ತಿದ್ದ ಮರದ ಬುಡದಲ್ಲಿ ಒಂದು ಬೀಜವೊಡೆದು ಗಿಡವಾಗುತ್ತಿರುವುದನ್ನು ಗಮನಿಸಿ ಬಹಳ ಕಾಳಜಿಯಿಂದ ಅದರ ಬೇರುಗಳಿಗಂಟಿದ

ಮಣ್ಣಿನೊಂದಿಗೆ ಮೃದುವಾಗಿ ಎತ್ತಿಕೊಂಡು ತನ್ನ ಮನೆಗೆ ತಂದು ಅದನ್ನು ಪೋಷಿಸುವುದಕ್ಕೆ ಮುಂದಾಗುತ್ತಾನೆ.

ಹೀಗೆ ಅವನು ಪ್ರೀತಿಯಿಂದ ಹೆಣೆದುಕೊಂಡ ಪ್ರಪಂಚದಲ್ಲಿ, ಹಾಡುಗಳ ಕ್ಯಾಸೆಟ್ಟುಗಳು, ಮನಸ್ಸಿಗೆ ಮುದನೀಡಲು ಸಂಗೀತ, ನೆನಪಿಗೆ ಅರ್ಹವಾದ ಕ್ಷಣಗಳನ್ನು ಸೆರೆ ಹಿಡಿಯಲು ಸದಾ ಸಿದ್ಧವಾಗಿರುವ ಕ್ಯಾಮೆರಾ, ನೆನಪಾದಾಗ ತೆರೆದು ನೋಡುವ ಫೋಟೋಗಳ ಬೃಹತ್ ಸಂಗ್ರಹ, ಸೆಕೆಂಡ್ ಹ್ಯಾಂಡ್ ಮಳಿಗೆಯಿಂದ ಖರೀದಿಸಿ ನೀಟಾಗಿ ಜೋಡಿಸಿಟ್ಟ ಪುಸ್ತಕಗಳು ಮತ್ತು ಅವುಗಳನ್ನು ಪ್ರತಿ ರಾತ್ರಿ ಮಲಗುವ ಮೊದಲು ಓದುವ ಹವ್ಯಾಸ , ಕಾಳಜಿಯಿಂದ ಮನೆಯೊಳಗೇ ಪೋಷಿಸುತ್ತಿರುವ ಗಿಡಗಳು, ಇತ್ಯಾದಿಗಳು ಪ್ರಧಾನ ಪಾತ್ರವಹಿಸುತ್ತವೆ.

ವಿಸ್ಮಯವೆಂದರೆ, ಹಿರಾಯಮಾನ ಬಾಹ್ಯ ಮತ್ತು ಆಂತರಿಕ ಪ್ರಪಂಚದಲ್ಲಿ ಮನುಷ್ಯರಿಗೆ ಹೆಚ್ಚು ಜಾಗವಿಲ್ಲ. ಅವರು ಬಂದು ಹೋಗುತ್ತಿರುತ್ತಾರೆ ಅಷ್ಟೇ. ಅವನೊಂದಿಗೆ ಸ್ವಲ್ಪ ಕಾಲ ನೆಲೆಸುವ ಅವನ ತಂಗಿಯ ಮಗಳು ಅವನ ಒಂಟಿ ಜೀವನ ಶೈಲಿಯನ್ನು ಬದಲಾಯಿಸುವ ಬದಲು, ಅವಳೇ ಇವನ ಜೀವನಶೈಲಿಯನ್ನು ಅನುಕರಿಸುತ್ತಾಳೆ. ಈ ಮೂಲಕ ಅವನ ಜೀವನಶೈಲಿಯನ್ನು ಸಮರ್ಥಿಸಲಾಗಿದೆ. ಅವನ ವರ್ತಮಾನದ ನಿರ್ಲಿಪ್ತತೆಗೆ ಕೆಲವು ದೃಶ್ಯಗಳಲ್ಲಿ ಕುರುಹುಗಳು ದೊರೆತರೂ ಅವುಗಳನ್ನು ವಿಸ್ತರಿಸುವ ಗೋಜಿಗೆ ಈ ಸಿನೆಮಾ ಪ್ರಯತ್ನಿಸುವುದಿಲ್ಲ. ಇಲ್ಲಿ, ನೆನಪುಗಳ ಮರುಕಳಿಕೆ ಮತ್ತು ಸಂಬಂಧಿತ ರೋದನೆಗೆ ಜಾಗವಿಲ್ಲ.

ಈ ಸಿನೆಮಾದ ಪಾತ್ರನಿರ್ವಹಣೆಯ ಕುರಿತು ಹೇಳುವುದಾದರೆ, ಪ್ರಧಾನ ಪಾತ್ರ ನಿರ್ವಹಿಸಿದ ಯಕುಶೋ, ಅವರ ಸಂಯಮದ ಅಭಿನಯ ಸಿನಿಮಾದ ಬಹು ಮುಖ್ಯ ಅಂಶ. ನಾಯಕನ ಮುಖದಲ್ಲಿ ಆವರಿಸಿರುವ ಶಾಂತಿ, ಸಮಾಧಾನ ಬಹುಕಾಲ ಪ್ರೇಕ್ಷಕರ ಮನದಲ್ಲಿ ಉಳಿಯುತ್ತವೆ.

ವರ್ತಮಾನ ಜಗತ್ತು ನಮಗೆ ಉಣಬಡಿಸುವ ವೈಭವ ಜೀವನದ ಅಬ್ಬರದ ನಡುವೆ ಈ ಸಿನೆಮಾ ನಮಗೆ ನೀಡುವ ಸಂದೇಶವೆಂದರೆ, ಬದುಕನ್ನು ಸಂಭ್ರಮಿಸಲು ಅಪೂರ್ವ ಘಟನೆಗಳೇನೂ ಬೇಕಾಗಿಲ್ಲ, ಯಾವುದೇ ಐಷಾರಾಮವಿಲ್ಲದೆ ದೈನಂದಿನ ಜೀವನವನ್ನು ಸುಂದರವಾಗಿಸಬಹುದು. ಇಲ್ಲಿ ಹೊಸತನದ ತುಡಿತ, ಇದಿರು ನೋಡುವಿಕೆಗಳನ್ನು ತಿರಸ್ಕರಿಸಲಾಗಿದೆ. ಅವನ ಕೈಯಲ್ಲಿರುವ ಹಳೆಯ ಶೈಲಿಯ ಕೈಗಡಿಯಾರ, ಕ್ಯಾಮೆರಾ, ಕ್ಯಾಸೆಟ್ ಟೇಪ್ ಗಳು ಅದನ್ನೇ ಹೇಳುತ್ತವೆ. ಅದೇ ರೀತಿ ಅತ್ಯಾಧುನಿಕ ವ್ಯವಸ್ಥೆಗಳನ್ನು ಹೊಂದಿರುವ ಟೋಕಿಯೋ ನಗರದಲ್ಲಿಯೂ ವಿಶಾಲ ಮರಗಳ ನೆರಳಿಗೆ ಹೆಚ್ಚು ಮಹತ್ವ ನೀಡಲಾಗಿದೆ. ಅವನ ಕೆಲಸದಲ್ಲಿರುವ ಮಗ್ನತೆ, ಹಾಡು ಕೇಳುವುದು, ಪುಸ್ತಕ ಓದುವುದು, ಪ್ರಕೃತಿ ವೀಕ್ಷಣೆ ಎಲ್ಲವನ್ನು ಅವನು ಸಮಾನವಾಗಿ ಸ್ವೀಕರಿಸುತ್ತಾನೆ. ಇಲ್ಲಿನ ನಾಯಕ ತನ್ನೆಲ್ಲಾ ಹುಡುಕಾಟವನ್ನು ಮುಗಿಸಿದ ಬುದ್ಧನಂತೆ ಜ್ಞಾನೋದಯದ ತುತ್ತುದಿ ಮುಟ್ಟಿದ ನಿರ್ಲಿಪ್ತತೆಯನ್ನು ಪ್ರಕಟಿಸುತ್ತಾನೆ.

ಈ ಸಿನೆಮಾದಲ್ಲಿ, ಜನಪ್ರಿಯ ಮತ್ತು ಪ್ರಚಲಿತ ಮಾರ್ಗಕ್ಕೆ ಪರ್ಯಾಯವಾದ ಸರಳ ಮತ್ತು ಸಂತೃಪ್ತ ಬದುಕಿನ ಸಾಧ್ಯತೆಯನ್ನು ತೋರಿಸಲಾಗಿದೆ. ಮಾಡುವ ಕೆಲಸ ಯಾವುದಾದರೇನು, ಆರ್ಥಿಕ ಸ್ಥಿತಿಗತಿ ಹೇಗಿದ್ದರೇನು, ಜೊತೆಯಲ್ಲಿ ಯಾರೂ ಇಲ್ಲದಿದ್ದರೇನು, ನಗುನಗುತ್ತ ಬದುಕಬಹುದು, ಒಂಟಿತನ ಕಾಡದೆ.... ಇದುವೇ ಪರಿಪೂರ್ಣ ದಿನಗಳ ದೃಶ್ಯ ಕಾವ್ಯ... ಪರ್ಫೆಕ್ಟ್ ಡೇಸ್.

ಈ ಸಿನೆಮಾವು ಕೆನಡಾದ ಗಾಯಕ ಮೈಕೆಲ್ ಬಬಲ್ ಹಾಡಿದ ಗೀತೆಯೊಂದಿಗೆ ('It is a new dawn, it is a new day, it is a new life for me, and I am feeling good---') ಅರ್ಥಪೂರ್ಣವಾಗಿ ಕೊನೆಗೊಳ್ಳುತ್ತದೆ. ಇದು, ಕವಿ ಬೇಂದ್ರೆ, 'ಯುಗಾದಿ' ಕವನದಲ್ಲಿ ಎತ್ತಿರುವ, 'ನಿದ್ದೆಗೊಮ್ಮೆ ನಿತ್ಯ ಮರಣ, ಎದ್ದ ಸಲ ನವೀನ ಜನನ ನಮಗೆ ಏಕೆ ಬಾರದೋ?' ಪ್ರಶ್ನೆಗೆ ಉತ್ತರವನ್ನು ಪ್ರಾಯೋಗಿಕವಾಗಿ ತೆರೆಯ ಮೇಲೆ ಹಿರಾಯಮಾ ಬದುಕಿ ತೋರಿಸುವಂತೆ ಭಾಸವಾಗುತ್ತದೆ. ಬೇಂದ್ರೆಯ ಕವನದ ಸಾಲಿಗೆ ಸಮಾನ ಅರ್ಥ ನೀಡುವ ಹೇಳಿಕೆಯನ್ನು 19ನೇ ಶತಮಾನದ ಜರ್ಮನ್ ತತ್ವಜ್ಞಾನಿ ಆರ್ಥರ್ ಸ್ಕೋಪೆನ್ಹೌರ್ ಕೂಡ ಮಾಡಿದ್ದ- 'Each day is a little life: every waking and rising a little birth, every fresh morning a little youth, every going to rest and sleep a little death.' ಈ ದೃಶ್ಯದಲ್ಲಿ ಕೋಜಿ ಯಕುಶೋ ಅದ್ಭುತವಾಗಿ ವ್ಯಕ್ತಪಡಿಸುವ ನಗು-ಅಳು ಮಿಶ್ರಿತ ಮುಖಭಾವಗಳು ಜೀವನದ ಒಟ್ಟು ತಾತ್ಪರ್ಯವನ್ನು ಸಂಕ್ಷಿಪ್ತವಾಗಿ ಹೇಳುತ್ತವೆ ನಾವು ಈ ಹಿತನುಡಿಗಳಿಗೆ ಕಿವುಡಾಗಿದ್ದೇವೆ, ಕುರುಡಾಗಿದ್ದೇವೆ. ಇದನ್ನು 'ಪರ್ಫೆಕ್ಟ್ ಲೈಫ್' ಇನ್ನೊಮ್ಮೆ ಜ್ಞಾಪಿಸುವ ಪ್ರಯತ್ನ ಮಾಡುತ್ತದೆ.

ಕೊನೆಯದಾಗಿ, ಹಿರಾಯಮಾ ಪ್ರತಿದಿನ ಏಳುವಾಗ ಅವನ ಮುಖದಲ್ಲಿ ಮೂಡುವ ಮುಗುಳುನಗೆ, ದಿನಚರಿಗೆ ಸಿದ್ಧತೆ, ಅಚ್ಚುಕಟ್ಟಾಗಿ ಮಾಡುವ ಕೆಲಸ, ಪ್ರಕೃತಿಯೊಂದಿಗೆ ಕಳೆಯುವ ಸ್ವಲ್ಪ ಸಮಯ ಮತ್ತು ಮಲಗುವ ಮೊದಲು ಮಾಡುವ ಓದು, ಮನುಷ್ಯ ಲೋಕದ ವ್ಯವಹಾರಗಳಿಗೆ ತೋರುವ ನಿರ್ಲಿಪ್ತತೆ, ಎಲ್ಲವೂ ನಮಗೊಂದು ಪರ್ಯಾಯ 'ಪರ್ಫೆಕ್ಟ್ ಡೇ' ಯನ್ನು ತೆರೆದಿಡುತ್ತದೆ. ಒಟ್ಟಿನಲ್ಲಿ, ಹಿರಾಯಮಾ ನಮಗೆ ಆಧುನಿಕ ಲೋಕದ ಸಂತನಂತೆ ತೆರೆಯ ಮೇಲೆ ಕಾಣಿಸುತ್ತಾನೆ.



**ಡಾ. ಜ್ಯೋತಿ**
**ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ,**
**ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು,**
**ತುಮಕೂರು**

**ವಾಚಕರ ವಾಣಿ**

ಈ ಸಲದ ಶೆಟ್ಟಿಗಾರ ವಾಣಿ ವಾರ್ಷಿಕೋತ್ಸವ ವಿಶೇಷ ಸಂಚಿಕೆ ಹದಿನೇಳು ಪುಟಗಳಿಂದ ಘನವಾಗಿತ್ತು!

ಈ ಸಲದ ಪತ್ರಿಕೆಯಲ್ಲಿ ವೈವಿಧ್ಯಮಯ ಕವನಗಳು, ಮೌಲ್ಯಾಧಾರಿತ ಬರೆಹಗಳು, ಕೌತುಕಮಯ ಕಥೆಗಳು, ಸಚಿತ್ರಲೇಖನಗಳು, ವ್ಯಂಗ್ಯಚಿತ್ರ, ಜೊತೆಗೆ ವಾಚಕರವಾಣಿಯಿದ್ದು ಓದುಗನಿಗೆ ರಸದೌತಣವನ್ನೀಯುತ್ತಿದೆ. ಎಲ್ಲ ಬರೆಹಗಾರರಿಗೆ ಅಭಿವಂದನೆಗಳು. ಈ ಎಲ್ಲದರ ಜೊತೆಗೆ ಪತ್ರಿಕೆಯ ಮುಖ್ಯ ಆಕರ್ಷಣೆ ಎಂದರೆ ಎ.ಐ ಆಧಾರಿತ ಚಿತ್ರಗಳು! ಲೇಖನಗಳಿಗೊಪ್ಪುವ, ಬಹಳ ಅರ್ಥಪೂರ್ಣವಾದ ಚಿತ್ರವನ್ನು ಸೃಷ್ಟಿಸಿದ, ಪತ್ರಿಕೆಯನ್ನು ಚಂದವಾಗಿ ವಿನ್ಯಾಸ ಮಾಡಿದ ವಿನ್ಯಾಸತಂಡಕ್ಕೆ ವಿಶೇಷವಾದ ಅಭಿನಂದನೆಗಳು. ಇದರ ಜೊತೆಗೆ ಬಹಳ ಮುತುವರ್ಜಿವಹಿಸಿ ಪತ್ರಿಕೆಯನ್ನು ಮುನ್ನಡೆಸುತ್ತ ಪ್ರತಿತಿಂಗಳು ಒಂದನೇ ತಾರೀಕಿನಂದೇ ಪತ್ರಿಕೆಯನ್ನು ನಮಗೆ ತಲುಪಿಸುವ ಸಂಪಾದಕ ಮಂಡಳಿಗೆ ಅನಂತ ಧನ್ಯವಾದಗಳು.

ಇತಿ,
**ಶೆಟ್ಟಿಗಾರ ವಾಣಿಯಭಿಮಾನಿ**
**ರಮೇಶ್ ಶೆಟ್ಟಿಗಾರ್ ಮಂಜೇಶ್ವರ**



# ಅಮ್ಮ

ತುತ್ತಿನ ಜೊತೆಯಲಿ ಮುತ್ತನು ನೀಡುತ
ಕತೆಯನು ಹೇಳಲು ನೀನಮ್ಮ|
ಸುತ್ತಲು ನೋಡುತ ಖುಷಿಯಲಿ ಕೇಳಿ
ಪ್ರಶ್ನೆಯ ಹಾಕುವೆ ನಾನಮ್ಮ||೧||

ಬಿಡದೆಯೆ ಕಾಡುತ ಸಿಟ್ಟನು ಮಾಡಲು
ತಿದ್ದುವೆ ಕಂದನ ನೀನಮ್ಮ|
ಮಡಿಲಲಿ ಮಲಗಿಸಿ ಜೋಗುಳ ಹಾಡಲು
ಜಗವನೆ ಮರೆಯುವೆ ನಾನಮ್ಮ||೨||

ಕಣ್ಣಿನ ರೆಪ್ಪೆಯ ತರಹದಿ ಕಂದನ
ಸಲಹುವೆ ನಿತ್ಯವು ನೀನಮ್ಮ|
ತಣ್ಣಗೆ ಕಷ್ಟವ ನುಂಗುವ ಅಮ್ಮನ
ಮರೆಯೆನು ಎಂದಿಗು ನಾನಮ್ಮ||೩||

ನಡೆಯಲು ಕಲಿಸಿದ ನುಡಿಯಲು ಕಲಿಸಿದ
ದೇವತೆಯಾಗಿಹೆ ನೀನಮ್ಮ|
ಎಡವದೆ ಬದುಕಲಿ ಮುಂದಕೆ ಸಾಗುವೆ
ಸಂಸ್ಕೃತಿ ಮರೆಯದೆ ನಾನಮ್ಮ||೪||



**ಶೋಭಾ ಹರಿಪ್ರಸಾದ ಶೆಟ್ಟಿಗಾರ**
**ಉಡುಪಿ**



# ದೇವರ ನೋಡಿ ನೋಡಿ

ದೇವರ ನೋಡಿ ನೋಡಿ । ವೀರಭದ್ರ
ದೇವರ ನೋಡಿ ನೋಡಿ ॥
ಬ್ರಹ್ಮಲಿಂಗ ವೀರಭದ್ರ ಶ್ರೀ ದುರ್ಗಾಪರಮೇಶ್ವರಿ ನೋಡಿ ॥ದೇವರ॥ಪ॥

ದೇವರ ನೋಡಿ ನಲಿನಲಿದಾಡಿ
ಭಾವಭಕ್ತಿಯಲಿ ಭಜನೆಯ ಮಾಡಿ ॥ದೇವರ॥೧॥

ಕರದಲಿ ತ್ರಿಶೂಲ ಕತ್ತಿ ಗುರಾಣಿ
ವರ ಶಸ್ತ್ರಾಸ್ತ್ರ ಧನುಶರಪಾಣಿ ॥ದೇವರ॥೨॥

ದಕ್ಷಾಧ್ವರವ ಕೆಡಿಸಿದ ವೀರ
ದಕ್ಷನ ಶಿರವ ಕಡಿದ ಹಮ್ಮೀರ ॥ದೇವರ॥೩॥

ನಂಬಿದ ಜನರ ಪೊರೆಯುವ ದೇವ
ಬೆಂಬಿಡದೆಮ್ಮ ಅನುದಿನ ಕಾವ ॥ದೇವರ॥೪॥



**ನಾರಾಯಣ ಶೆಟ್ಟಿಗಾರ್**
**ವಿಶ್ವಪ್ರಿಯನಗರ, ಬೆಂಗಳೂರು.**




# ನಿಧಾನಿಸು ನಿಧಾನಿಸು!

**"ಆವಾಜ್ ಆ? ನಾನ್ ಯಾರ್ ಗೊತ್ತೇನೋ. ಈ ಬಿಲ್ಡಿಂಗ್ ಓನರ್ ಗೆ ಆವಾಜ್ ಹಾಕಿ ವಸೂಲಿ ಮಾಡೋನು. ನಂಗೇ 'ಆವಾಜ್ ಹಾಕ್ತಿಯಾ' ಅಂತ ಹೇಳ್ತಿಯಾ ಮಗನೇ, ಹೆಂಗಿದೆ ಮೈಗೆ"?** ತನ್ನ ಹತ್ತು ಬೆರಳಲ್ಲೂ ಚಿನ್ನದ ಉಂಗುರಗಳು, ಬಿಳಿ ಶರ್ಟು ಅದ್ರಲ್ಲಿ ಮೇಲಿನ ಮೂರು ಬಟನ್ ಓಪನ್, ಕತ್ತಲ್ಲಿ ದಪ್ಪದ ರೋಪ್ ಚೈನು, ಕಪ್ಪು ಮೈ ಬಣ್ಣದ ಮೇಲೆ ಕಪ್ಪು ಪ್ಯಾಂಟು, ಊದಿದ್ದ ಬಲೂನಿನ ಹಾಗೆ ಇದ್ದ ಈ ಆಟೋ ರಾಜ.

ರಾತ್ರಿ ಓಂ ಚಿತ್ರ ನೋಡಿ ಮಲಗಿ, ಬೆಳಗೆದ್ದು 'ಮೆನ್ ಇನ್ ಬ್ಲಾಕ್' ಹಾಗೆ ಕಪ್ಪು ಪ್ಯಾಂಟ್, ಕಪ್ಪು ಶರ್ಟ್, ಕಪ್ಪು ಕೂಲಿಂಗ್ ಗ್ಲಾಸ್, ಕಪ್ಪು ಹಾಫ್ ಹೆಲ್ಮೆಟ್, ಕಿವಿಯಲ್ಲಿ ಇಯಾರ್ ಪಾಡ್ಸ್ ಜೊತೆಗೆ ಕನ್ನಡ ಪ್ಲೇಲಿಸ್ಟ್ ಆನ್ ಮಾಡ್ಕೊಂಡ್, ಕಪ್ಪು ಫೇಸ್ ಮಾಸ್ಕ್ ಹಾಕೊಂಡ್ ಕಪ್ಪು ಹೋಂಡಾ ಗ್ರಾಝಿಯಾ (ಸ್ಕೂಟರ್) ಗಾಡಿಯಲ್ಲಿ ಕಾಲೇಜ್ ಹುಡುಗ್ರ ಹಾಗೆ ಝಿಗ್ ಝಗ್ ಸ್ಟೈಲ್ ನಲ್ಲಿ ಹೆಚ್.ಎಸ್.ಆರ್ ಲೇಔಟ್ನಲ್ಲಿ ಇರುವ ನನ್ನ ಆಫೀಸ್ ಕಡೆಗೆ ಹೊರಟಿದ್ದೆ.

ನಾಯಂಡಹಳ್ಳಿಯಿಂದ ಒಂದೇ ರಸ್ತೆ. ಜೆ.ಪಿ. ನಗರದ ಔಟರ್ ರಿಂಗ್ ರೋಡ್ ಕಡೆಯಿಂದ ಬಂದು ವೆಗಾ ಸಿಟಿ ಮಾಲ್ ನ ಎದುರಿಗಿರುವ ಸಿಗ್ನಲ್ ನಲ್ಲಿ, "ಬಾನಿಗೊಂದು ಎಲ್ಲೇ ಎಲ್ಲಿದೆ... ನಿನ್ನಾಸೆಗೆಲ್ಲಿ ಕೊನೆ ಇದೇ.. ಏಕೇ ಕನಸು ಕಾಣುವೆ..." ಹಾಡು ಕೇಳುತ್ತ ನಿಂತಿರ್ಬೇಕಾದ್ರೆ ಎರಡು ಸಲ ಹಾರನ್ ಸೌಂಡ್ ಹಿಂದಿನಿಂದ ಬಂದಾಗ ತಿರುಗಿ ನೋಡಿದೆ. ಮೊಬೈಲ್ ನಲ್ಲಿ ಹಾಡನ್ನು pause ಮಾಡಿದೆ. ನನ್ನ ಹಿಂದೆ ಇನ್ನೆರಡು ಟೂ ವೀಲರ್ ಬಿಟ್ಟು ಒಬ್ಬ ಆಟೋ ಡ್ರೈವರ್ ಕೈ ತೋರಿಸಿ, 'ಒಂದ್ ಸ್ವಲ್ಪ ಮಾತಾಡ್ಬೇಕು' ಅಂತ ಸನ್ನೆ ಮಾಡಿದ ಹಾಗೆ ಅನ್ನಿಸಿತು. 'ಸಿಗ್ನಲ್ ಆದ್ಮೇಲೆ ನಿಲ್ಲುವೇ' ಅನ್ನೋ ಹಾಗೆ ಕೈಯಲ್ಲೇ ನಾನು ಸನ್ನೆ ಮಾಡಿದೆ. ಸಿಗ್ನಲ್ ಬಿಡ್ಲಿಕ್ಕೆ ಒಂದಿಪ್ಪತ್ತು ಸೆಕೆಂಡು ಇತ್ತು. ಅಷ್ಟರಲ್ಲಿ ಯಾಕೋ ಏನೇನೋ ಯೋಚನೆಗಳು ಬಂದವು. ಇವನೇನಾದ್ರು ಜಗಳ ಮಾಡಲು ಬಂದಿರ್ಬೇಕಾ ಅಥವಾ ನಾನೇನಾದರೂ ಬೀಳಿಸ್ಕೊಂಡಿದ್ದಿನಾ, ಏನಿರ್ಬಹುದು? ಎಂದು ಆಲೋಚಿಸುವಷ್ಟರಲ್ಲಿ ಸಿಗ್ನಲ್ ಬಿಟ್ಟಿತು. ವೆಗಾ ಸಿಟಿ ಮಾಲ್ ಎಂಟ್ರೆನ್ಸ್ ನ ಗೇಟ್ ಪಕ್ಕ ಹೋಗಿ ನಿಲ್ಲಿಸಿದೆ. ಆಟೋ ರಾಜ ಬಂದ.

ಬಲಗೈಯೆತ್ತಿ ಒಂದೇ ಕೈಯಲ್ಲಿ ಸಲ್ಯೂಟ್ ಹೊಡೆದ ಹಾಗೆ ನಮಸ್ಕರಿಸಿ "ನಮಸ್ಕಾರ ಸರ್. ಹೇಗಿದ್ದೀರಾ" ಅಂದ.

ಯಾರಪ್ಪ ಇವನೂ? ಪರಿಚಯನೇ ಇಲ್ವಲ್ಲಾ! ಯಾರ್ ಇರ್ಬಹುದು? ಅಂತ ಆಲೋಚಿಸ್ತಾ, ನಾನು ಸಹ "ನಮಸ್ಕಾರ" ಅಂದೆ. ಇವನು ನೋಡ್ಲಿಕ್ಕೆ ರೌಡಿ ಹಾಗೆ ಇದ್ದ. ಒಂದ್ ಕಡೇ ಯಾರೋ ನನ್ನ ಎತ್ ಬಿಡ್ಲಿಕ್ಕೆ ಸುಪಾರಿ ಕೊಟ್ಟಿರಬೇಕು. ಅವನ ಕೈ ಹಾಗೂ ಆಟೋ ಒಳಗೆ ಒಂದ್ ಸಲ ಸ್ಕ್ಯಾನ್ ಮಾಡಿದೆ - ಲಾಂಗು, ಮಚ್ಚು ಅಥವಾ ಗನ್ ಏನಾದ್ರು ಇಟ್ಕೊಂಡಿದ್ದಾನಾ ಅಂತ. ಅಂತಹದ್ದೇನೂ ಮೇಲ್ನೋಟಕ್ಕೆ ಕಾಣಿಸಲಿಲ್ಲ. ನಾನು ಯಾರಿಗೂ ಇಲ್ಲಿ ತನಕ ಅವಾಜ್ ಹಾಕಿಲ್ವಲ್ಲ? ನನ್ನ ಯಾಕೆ ಇವ್ನು ಟಾರ್ಗೆಟ್ ಮಾಡ್ತಾವ್ನೆ. ರಾತ್ರಿ ಓಂ ಮೂವಿ ನೋಡಿರೋ ಎಫೆಕ್ಟ್ ಇರ್ಬೇಕು ಅನ್ಕೊಂಡೆ.

ಆಟೋ ರಾಜ ಕೇಳಿದ "ಸರ್, ಹೇಗ್ ಸರ್ ಗಾಡಿ ಓಡ್ಸೋದು"

ಈಗ ಗೊತ್ತಾಯಿತು ಮ್ಯಾಟರ್ ಏನಂತ. ಧೈರ್ಯದಿಂದ ಕೇಳಿದೆ "ಯಾಕೆ? ಏನಾಯಿತು".

"ಏಯ್.. ಯಾಕೆ ಗಾಡಿ ಓಡ್ಸಕ್ಕೆ ಬರಲ್ವಾ. ಸಾರಕ್ಕಿ ಸಿಗ್ನಲ್ ದೇವಸ್ಥಾನ ಹತ್ರ ಟಚ್ ಮಾಡ್ಕೊಂಡ್ ಹೋದ್ಯಲ್ಲ. ನಿಲ್ಲಿಸ್ಲೆ ಇಲ್ಲ. ಹಂಗೆ ಓಡೋಗ್ತಿಯಾ?" ಎಂದು ಗದರಿಸಿದ.

"ನಾನ್ ಯಾವಾಗ ಟಚ್ ಮಾಡಿದೆ. ಸಾರಕ್ಕಿ ಸಿಗ್ನಲ್ ನಲ್ಲಿ ಯಾವ್ ದೇವಸ್ಥಾನ ಇದೆ" ಎಂದು ಕೇಳಿದೆ.

"ಅಲ್ಲೇ ಮುಂದೆ ದೇವಸ್ಥಾನ ಇದೆ. ಅದಲ್ಲ ವಿಷ್ಯ. ನಾನು ಟರ್ನ್ ತಗೋಬೇಕಾದ್ರೆ ನಿನ್ ಗಾಡಿ ಸೈಲೆನ್ಸರ್, ನನ್ ಆಟೋಗೆ ಟಚ್ ಆಯಿತು." ಎಂದು ಹೇಳಿದ.

"ಎಲ್ ಟಚ್ ಆಯಿತು? ತೋರ್ಸಿ" ಎಂದು ಕೇಳಿದೆ.

“ಬಾ ಇಲ್ಲಿ” ಎಂದು, ಆಟೋದ್ ಹಿಂದಿನ ಟೈಯರ್ ನ ಲೆಫ್ಟ್ ಮಡ್-ಗಾರ್ಡ್ ಅಲ್ಲಿ ಒಂದು ರಬ್ ಆಗಿರೊ ಲೈನ್ ತೋರಿಸಿದ.

ಆದರೆ ಅದು ಹಸಿರು ಬಣ್ಣ. ನನ್ನ ಸೈಲೆನ್ಸರ್ ಕಪ್ಪು. ಕಪ್ಪು ಮಾರ್ಕ್ ಇರ್ಬೇಕಿತ್ತು ಅಥವಾ ನನ್ನ ಸೈಲೆನ್ಸರ್ ಮೇಲೆ ಹಸಿರು ಬಣ್ಣ ತಾಗ್ಬೇಕಿತ್ತು ಅಂತ ಅಂಕೊಳ್ತಿದ್ದಾಗೆ ನಾನು ಕೇಳಿದೆ "ಹೆಂಗಯ್ಯಾ ಇದು ನನ್ ಗಾಡಿಯಿಂದ ಟಚ್ ಆಗಿರೋದು ಅಂತಿಯ. ಅಕಸ್ಮಾತ್ ಟಚ್ ಆಗಿದ್ರೆ, ನನ್ ಗಾಡಿ ಮೇಲು ಮಾರ್ಕ್ ಇರ್ಬೇಕಲ್ಲಾ” ಅಂದೆ.

ಅವನು “ನೋಡು ನಿನ್ ಸೈಲೆನ್ಸರ್ ನ”.

ಸೈಲೆನ್ಸರ್ ನೋಡಿದ್ರೆ ಏನು ಮಾರ್ಕೆ ಇರ್ಲಿಲ್ಲ. “ಎಲ್ಲಿದೆ ಮಾರ್ಕ್ ತೋರ್ಸಿ. ನನ್ನ ಗಾಡಿ ಅಲ್ಲ ಬೇರೆ ಯಾವ್ದೋ ಗಡಿ ಇರ್ಬೇಕು. ಸುಮ್ನೆ ನನ್ನ ಫಾಲೋ ಮಾಡ್ಕೊಂಡ್ ಬಂದಿದ್ದೀರಾ” ಅಂದೆ.

“ಏಯ್ ನಂಗೇನ್ ತಲೆ ಕೆಟ್ಟಿದ್ಯಾ, ನಿನ್ ಹಿಂದೆ ಬರಕ್ಕೆ. ಸ್ಕೂಟಿ ಅಲ್ಲಿ ಹೋಗ್ತಿರೋದು ನೀನು. ಸೂಪರ್ ಬೈಕ್ ಓಡ್ಸೋ ಹಾಗೆ ಓಡಿಸ್ಕೊಂಡ್ ಹೋಗ್ತಿಯ. ಮಗನೆ!” ಅಂತ ಬೈದ.

ಆಗ ಅರ್ಥ ಆಯಿತು. ಇದು 'ಟಚ್' ಅಲ್ಲಾ 'ಸ್ಪೀಡ್' ಸಮಸ್ಯೆ. ಸ್ವಲ್ಪ ಯೋಚಿಸಿದೆ ‘ಇವ್ನ್ ಜೊತೆ ಜಗಳ ಆಡೋಕೆ ಆಗಲ್ಲ. ನೋಡ್ಲಿಕ್ಕೂ ರೌಡಿ ತರಾ ಕಾಣಿಸ್ತಾನೆ, ಸುಮ್ನೆ SORRY ಕೇಳಿ ಬಿಡೋಣ' ಅಂತ “SORRY ಗುರು” ಅಂದೆ.




“ಏಯ್. ನಿನ್ SORRY ಎಲ್ಲ ಬೇಕಾಗಿಲ್ಲ” ಮತ್ತೊಮ್ಮೆ ಗದರಿದ.

“ಏನ್ ಅವಾಜ್ ಹಾಕ್ತಿರಾ. SORRY ಕೇಳ್ದೆ ತಾನೇ. ಈಗ ಸುಮ್ನೆ ಬಿಡಿ, ಏನಾಗಿಲ್ಲ ನಿಮ್ಮ ಗಾಡಿಗೆ“ ಅಂದೆ.

"**ಅವಾಜ್ ಆ? ನಾನ್ ಯಾರ್ ಗೊತ್ತೇನೋ. ಈ ಬಿಲ್ಡಿಂಗ್ ಓನರ್ ಗೆ......** " ಅಂತ ನನ್ ಮೇಲೆ ರೇಗ್ತಿರ್ಬೇಕಾದ್ರೆ, ಏಳೆಂಟು ಜನ ಸೇರ್ಕೊಂಡ್ರು. ಇವ್ನು ಮಾತಾಡ್ತಿರೋ ಸ್ಟೈಲ್ ನೋಡಿ ಅವ್ರೆಲ್ಲ ಫಿಲಂ ನೋಡೋ ಹಾಗೆ ನೋಡ್ತಿದ್ರು.

“ಮಾಸ್ಕ್ ತೆಗ್ಯೋ. ಮುಖ ತೋರ್ಸೋ” ಅಂದ.

ಹೆಲ್ಮೆಟ್ ತೆಗೆದಿರನೇ ಮಾಸ್ಕ್ ಅನ್ನು ಕತ್ತಿನ ತನಕ ಇಳಿಸ್ತಿರ್ಬೇಕಾದ್ರೆ, “ಒಹ್ ಅಂಕಲ್ಲು. ವಯಸ್ಸಾಗಿದೆ. ನೋಡ್ಕೊಂಡ್ ಓಡ್ಸು. ಇಲ್ಲಾಂದ್ರೆ, ಟಿಕೆಟ್ ತಗೊಂಡ್ ಬಿಡ್ತಿಯ” ಅಂತ ಕರುಣೆ ತೋರ್ಸೋ ಹಾಗೆ ಜೋರು ಧ್ವನಿಯಲ್ಲೆ ಹೇಳಿದ.

*ನನ್ನ ಮನಸಲ್ಲಿ 'ಹೆಂಗ್ ಹೇಳ್ದ ಗುರು ಇವನು ನಂಗೆ ವಯಸ್ ಆಗಿದೆ ಅಂತ? ನನ್ ಮುಖದಲ್ಲಿ ಏನಾದ್ರು ಇದೆಯಾ? ಅಥವಾ ಬಿಳಿ ಮೀಸೆ ಗಡ್ಡ ಬಂದಿದ್ಯ' ಅನ್ನೊ ಆಲೋಚನೆ.*

ಅಲ್ಲಿದ್ದ ಜನರ ಮುಂದೆ ಮತ್ತೊಮ್ಮೆ ಅವನು “ನೋಡಿ ಟಚ್ ಮಾಡ್ಕೊಂಡ್ ಬಂದು ಇವಾಗ ಒಂದು SORRY ನು ಕೇಳ್ತಿಲ್ಲ. ಇವ್ನ್ ಜೊತೆ ಬೇರೇನೂ ಕೇಳಿಲ್ಲ. SORRY ಅಷ್ಟೇ ಕೇಳ್ತಿರೋದು“ ಅಂದ.

ವಯಸ್ಸಾಗಿದೆ ಅಂದಾಗ್ಲೇ ಸಿಟ್ಟು ಬಂದಿತ್ತು ಮತ್ತೆ ಬೇಜಾರು ಸಹ ಆಗಿತ್ತು. ಆ ಕೋಪದಲ್ಲಿ “SORRY ಅಂತ ಆಗ್ಲೇ ಕೇಳ್ದೆ ತಾನೇ. ಸುಳ್ ಹೇಳ್ಬೇಡಿ” ಅಂತ ಜೋರಾಗಿ ಹೇಳಿದೆ.

“ಸರಿ ಹೋಗು. ನೋಡ್ಕೊಂಡ್ ಓಡ್ಸು ಇನ್ಮುಂದೆ” ಅಂತ ಹೇಳಿ ಅವ್ನು ಆಟೋ ತಗೊಂಡ್ ಹೋದ. ಅವನು ಹೋದಮೇಲೆ ಅಲ್ಲಿದ್ದವರೆಲ್ಲ ಒಳ್ಳೆ ರೌಡಿ ಇದ್ದಾಗೆ ಇದ್ದಾನೆ ಸುಮ್ನೆ ವಾದ ಮಾಡ್ಬೇಡಿ ಅಂತವ್ರ ಜೊತೆ ಅಂದ್ರು. ನಾನು ಮಾಸ್ಕ್ ಹಾಕೊಳ್ದೆನೇ, ಮೊಬೈಲ್ ನಲ್ಲಿ ಪ್ಲೇ ಬಟನ್ ಒತ್ತಿದೆ “...... ನಿಧಾನಿಸು ನಿಧಾನಿಸು” ಅಂತ ಹಾಡು ಮುಂದುವರೆಯಿತು. ಅಲ್ಲಿಂದ ಅಣ್ಣಾವ್ರು ಹೇಳಿದ ಹಾಗೆ ನಿಧಾನವಾಗಿ ಹೊರಟೆ.

ಮುಂದೆ ಷೆಲ್ ಪೆಟ್ರೋಲ್ ಬಂಕ್ ಇಂದ ಲೆಫ್ಟ್ ತಗೊಂಡು ಮಡಿವಾಳ ಕೆರೆ ರೋಡ್ ನಲ್ಲಿ ಇದೆ scene ನೆನಪಿಸ್ಕೊಂಡ್ ಹೋಗ್ಬೇಕಾದ್ರೆ, ಆಗಾಗ ಗಾಡಿ ಮಿರರ್ ನಲ್ಲಿ ನನ್ ಮುಖ ನೋಡ್ಕೊಳ್ತಾ ಇದ್ದೆ. ಅವ್ನು ಹೆಂಗೆ “ಅಂಕಲ್. ವಯಸ್ಸಾಗಿದೆ” ಅಂದ? ಆಫೀಸ್ ಅಲ್ಲೂ ಅದೇ ಯೋಚ್ನೆ.

ಮನೆಗೆ ಬಂದು ಹತ್ರದಿಂದ ಕನ್ನಡಿ ನೋಡಿದೆ. ಮೀಸೆ ಮೇಲೆ ಒಂದು ಬಿಳಿ ಕೂದಲು ಕಾಣಿಸಿತು. ಆಗ ಗೊತ್ತಾಯಿತು. ‘ವಯಸ್ಸಾಗ್ತಾ ಇದೆ ನಿನಗೆ. 40 ದಾಟಿದ್ದೀಯ ಮಗನೆ. ಸೀನಿಯರ್ ಸೀನಿಯರ್ ಅಂತ ಬೇರೆ ಅವರಿಗೆಲ್ಲ ಹೇಳ್ತಿದ್ಯಲ್ಲ, ಈಗ ನೀನೆ ಸೀನಿಯರ್ ಸಿಟಿಜನ್ ಆಗ್ತಿದೀಯ ನೋಡು. ಮಿಲ್ಲೇನಿಯಲ್ಸ್ ಎಲ್ರು ಈಗ ಸೀನಿಯರ್ಸ್ ಆಗ್ತಿದ್ದಾರೆ. ಝೆನ್-ಝಿ, ಆಲ್ಫಾ, ಅವರೆಲ್ಲ ನಿನಗೆ ರೇಗಿಸೊ ಸಮಯ ಹತ್ರ ಆಗ್ತಾಯಿದೆ’ ಎಂದು ಕನ್ನಡಿ ನನಗೆ ಕನ್ನಡಿ ತೋರಿಸಿತು.



ಯಶಸ್ವಿ ಜೆ
ಜ್ಞಾನಭಾರತಿ
ಬೆಂಗಳೂರು

# ಶೆಟ್ಟಿಗಾರ ವಾಣಿ

## ಸಮಾಜ ಬಾಂಧವರ ಅವಗಾಹನೆಗಾಗಿ

- ಸಮಾಜದಲ್ಲಿರುವ ಸಾಹಿತ್ಯ ರಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವ **ಶೆಟ್ಟಿಗಾರ ವಾಣಿ** ತನ್ನ ಪ್ರಕಟಣೆಯನ್ನು ಪ್ರಾರಂಭಿಸಿ ಪ್ರಗತಿ ಪಥದಲ್ಲಿದ್ದು ಸಮಾಜ ಬಾಂಧವರ ಮೆಚ್ಚುಗೆಗೆ ಪಾತ್ರವಾಗಿದೆ.

- ಸಮಾಜ ಬಾಂಧವರು ಬರೆದಿರುವ ಕಥೆ, ಕವನ, ಪ್ರಬಂಧ, ಪ್ರವಾಸ ಕಥನಗಳು, ವೈಚಾರಿಕ ಲೇಖನಗಳು, ವೃತ್ತಿ ಮತ್ತು ಜೀವನ ಅನುಭವ ಗಾಥೆಗಳು, ನಗೆ ಬರಹಗಳು, ವ್ಯಂಗ್ಯ ಮತ್ತು ರೇಖಾಚಿತ್ರಗಳು ಮೊದಲಾದ ವಿಭಿನ್ನ ಸಾಹಿತ್ಯ ಕೃತಿಗಳನ್ನು ಸ್ವೀಕರಿಸಲಾಗುವುದು.

- ಆಯ್ಕೆಯಾದ ಬರಹಗಳನ್ನು ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

- ಬರಹಗಳ ಆಯ್ಕೆ ಮತ್ತು ಪ್ರಕಟಣೆಯ ವಿಷಯದಲ್ಲಿ ಪತ್ರಿಕೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

- ಲೇಖಕರು ತಮ್ಮ ಹೆಸರು, ವಿಳಾಸ, ಭಾವಚಿತ್ರ ಮತ್ತು ಕಿರು ಪರಿಚಯವನ್ನು ಲೇಖನದೊಂದಿಗೆ ನಮೂದಿಸಬೇಕು.

- ಪತ್ರಿಕೆಯ ಸರ್ವಾಂಗೀಣ ಪ್ರಗತಿಗೆ ಸಲಹೆ ಸೂಚನೆಗಳನ್ನು ಸಾದರದಿಂದ ಸ್ವೀಕರಿಸಲಾಗುವುದು.

ಆಸಕ್ತರು ತಮ್ಮ ಬರಹಗಳನ್ನು (WORD FILE) ಇಮೇಲ್ ಮೂಲಕ ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ (ಹೆಚ್ಚಿನ ಮಾಹಿತಿ, ವಿವರ ಮತ್ತು ನಿಮ್ಮ ಅನಿಸಿಕೆಗಳಿಗೆ ಸಂಪರ್ಕಿಸಿ):

**shettigaravani@gmail.com**
ವಾಟ್ಸಪ್ ನಂ. 9845660131

ಪತ್ರಿಕೆಯ ಓದುಗರು ತಮ್ಮ ಅನಿಸಿಕೆ ಮತ್ತು ಸಲಹೆಗಳನ್ನು ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿಕೆ:

**shettigaravani@gmail.com**
**Mob. No. 9845660131**

# ದ.ಕ. ಪದ್ಮಶಾಲಿ ಸಮಾಜ ಸೇವಾ ಕೂಟ (ರಿ)

Estd. 1989

ಆಡಳಿತ ಕಛೇರಿ: ನಂ. 8, ಶಾಂತವೇರಿ ಗೋಪಾಲಗೌಡ ನಗರ
4ನೇ ಮುಖ್ಯರಸ್ತೆ, ಮೂಡಲಪಾಳ್ಯ, ಬೆಂಗಳೂರು 560072


ದಿನಾಂಕ: 28-05-2025

## ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ

ಆತ್ಮೀಯ ಸಮಾಜ ಬಾಂಧವರೇ,

ದಿನಾಂಕ **6-ಜುಲೈ-2025** ರಂದು **ಭಾನುವಾರ** ಸಮಾಜ ಬಾಂಧವರಿಗಾಗಿ
ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮವನ್ನು

**A. V. Varadachar Kalakshetra & memorial hall**
(Near Mantri Mall Malleshwaram
Behind Nataraj Talkies)
A.V. Varadachar Road,
Jai Bheema Nagar,
Seshadripuram, Bengaluru 560020

**ಎ.ವಿ.ವರದಾಚಾರ್ ಕಲಾಕ್ಷೇತ್ರ ಮತ್ತು ಮೆಮೋರಿಯಲ್ ಹಾಲ್**
(ಮಂತ್ರಿ ಮಾಲ್ ಹಾತ್ತಿರ /
ನಟರಾಜ್ ಸಿನೆಮಾ ಹಾಲ್ ಹಿಂಬಾಗ)
ಎ.ವಿ.ವರದಾಚಾರ್ ರಸ್ತೆ,
ಜೈಭೀಮ್ ನಗರ, ಶೇಶಾದ್ರಿಪುರಂ,
ಬೆಂಗಳೂರು 560020

ಇಲ್ಲಿ **ಬೆಳಗ್ಗೆ 9.00 ಗಂಟೆಗೆ** ಸರಿಯಾಗಿ ನೆರವೇರಿಸಲಾಗುವುದು. ಈ ಪೂಜೆಯಲ್ಲಿ ಭಾಗವಹಿಸುವ ಸೇವಾರ್ಥಿಗಳು **ರೂ. 501/-** ಮುಂಗಡವಾಗಿ/ಪೂಜೆಯ ದಿನ ಕೊಟ್ಟು ತಮ್ಮ ಹೆಸರನ್ನು ಈ ಕೆಳಗೆ ನಮೂದಿಸಿರುವ ಸದಸ್ಯರಲ್ಲಿ ನೊಂದಾಯಿಸಿಕೊಳ್ಳಬೇಕು. ಸೇವಾರ್ಥಿಗಳು ತಮ್ಮೊಂದಿಗೆ ಹಣ್ಣು ಕಾಯಿ, ಹೂವುಗಳನ್ನು ತರಬಹುದು. ಶ್ರೀಸತ್ಯನಾರಾಯಣ ಸ್ವಾಮಿ ಪೂಜೆಯ ಸಂಕಲ್ಪಕ್ಕೆ ಉಪಸ್ಥಿತರಿರುವ ಪುರುಷರು ಸಾಂಪ್ರದಾಯಿಕ ಉಡುಗೆ ಪಂಚೆ, ಶಲ್ಯ ಮತ್ತು ಮಹಿಳೆಯರು ಸೀರೆ, ಚೂಡಿದಾರ ಧರಿಸಬೇಕೆಂದು ಕೋರುತ್ತೇವೆ. ಪೂಜೆಗೆ ನೋಂದಾಯಿಸಿಕೊಂಡ ಪೂಜಾ ಸೇವಾರ್ಥಿಗಳು ಮತ್ತು ಕೂಟದ ಎಲ್ಲಾ ಸದಸ್ಯರುಗಳು ಕುಟುಂಬ ಸಮೇತರಾಗಿ ಆಗಮಿಸಿ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡು ಪ್ರಸಾದ, ಭೋಜನವನ್ನು ಸ್ವೀಕರಿಸಿ ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

ತಮ್ಮ ಹೆಸರನ್ನು ಇವರಲ್ಲಿ ನೋಂದಾಯಿಸಿರಿ:

ಶ್ರೀ ಕೃಷ್ಣ ಶೆಟ್ಟಿಗಾರ್ - 98863 80271
ಶ್ರೀ ಮಿಜಾರು ರಾಮಚಂದ್ರ - 88847 83681
ಶ್ರೀ ವಿಠಲ್ ಶೆಟ್ಟಿಗಾರ್ - 96208 37047
ಶ್ರೀ ಸುಂದರ್ ಶೆಟ್ಟಿಗಾರ್ - 98453 41095

ಸಿ.ಎ. ವಿಶ್ರಾಂತ್ ಬಿ.ಎಲ್ - 99642 37094
ಶ್ರೀ ದೀಪಕ್ ರಾಜ್ - 89281 99473
ಶ್ರೀ ಸತ್ಯಪ್ರಕಾಶ್ - 99647 06967
ಶ್ರೀ ಗಣೇಶ್ ಕುಮಾರ್ - 98807 35868

ಕೂಟದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಪರವಾಗಿ

ಗೌ. ಕಾರ್ಯದರ್ಶಿ
ಯಶಸ್ವಿ ಜೆ

ವಿ.ಸೂ: ಸದಸ್ಯರು ತಮ್ಮ ವಿಳಾಸ, ಮೊಬೈಲ್ ನಂಬರ್ ಮತ್ತು ಈಮೈಲ್ ವಿಳಾಸಗಳಲ್ಲಿ ಬದಲಾವಣೆ ಇದ್ದಲ್ಲಿ ಕೂಡಲೇ ಈಮೈಲ್ ಮೂಲಕ dkpadmashalibng@gmail.com ಗೆ ಅಥವಾ 9008900488 / 9535443311 ಮೊಬೈಲ್ ಸಂಖ್ಯೆಗೆ ತಿಳಿಸಿರಿ.
(ಈ ಸುತ್ತೋಲೆಯನ್ನು ಕಳುಹಿಸಿರುವ ವಿಳಾಸವನ್ನು ಪರೀಕ್ಷಿಸಿಕೊಳ್ಳಿರಿ.)

ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ
ಸೇವಾ ಕೂಟ®, ಬೆಂಗಳೂರು

Estd. 1989

D.K. PADMASHALI SAMAJA SEVA KOOTA, BENGALURU

# ವಾರ್ಷಿಕ ಕ್ರೀಡಾ ಕೂಟ

# 2025



**27-ಜುಲೈ-2025**
ಭಾನುವಾರ

**ಯು.ಸಿ.ಪಿ.ಇ ಕ್ರೀಡಾಂಗಣ**
ಬೆಂಗಳೂರು ವಿಶ್ವವಿದ್ಯಾಲಯದ

**8AM - 6PM**